ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 102 RNI Number : KNKAN/25/A2770 21-04-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :102 ರಾಯಚೂರು 21-04-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ರಾಜ್ಯಾದ್ಯಂತ ಸಂಭ್ರಮದ ಬಸವ ಜಯಂತಿ ಆಚರಣೆ

ಬೆಂಗಳೂರು/ಮೈಸೂರು/ಬಳ್ಳಾರಿ/ರಾಯಚೂರು/ಗಂಗಾವತಿ/ ಚಿಕ್ಕಮಗಳೂರು: ರಾಜ್ಯದ ವಿವಿಧೆಡೆ ಇಂದು ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಸಂಭ್ರಮ, ಭಕ್ತಿಭಾವದಿಂದ ಆಚರಿಸಲಾಯಿತು.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾ ಬಸವ ದಳಗಳ ಒಕ್ಕೂಟ ಆಯೋಜಿಸಿದ್ದ ಬಸವ ಜಯಂತಿ-2026 ಕಾರ್ಯಕ್ರಮ ಉದ್ಘಾಟಿಸಿದ ಸಿಎಂ ಸಿದ್ದರಾಮಯ್ಯ, 2026ರ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿದರು.

2026ರ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಸಮಸಮಾಜದ ಕನಸು ಬಿತ್ತಿದ ಬಸವಾದಿ ಶರಣರ ಆಶಯಗಳು ಎಲ್ಲೆಡೆ ಮೊಳಕೆಯೊಡೆದು, ಹೆಮ್ಮರವಾಗಿ ಬೆಳೆದು ನಾಡು ಕಲ್ಯಾಣ ರಾಜ್ಯವಾಗಲಿ ಎಂದು ಸಿಎಂ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸಿದ್ದರಾಮ ಶರಣರು ಬೆಲ್ದಾಳ ಅವರು, ಸಚಿವರಾದ ಹೆಚ್.ಸಿ.ಮಹದೇವಪ್ಪ, ಶಿವರಾಜ್ ತಂಗಡಗಿ, ಶಾಸಕರಾದ ಹರೀಶ್ ಗೌಡ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರಿನ ಚಾಲುಕ್ಯ ವೃತ್ತ ಹಾಗೂ ವಿಧಾನಸೌಧದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಸಿಎಂ, ಬಸವಾದಿ ಶರಣರ ಬದುಕು ಮತ್ತು ಚಿಂತನೆಗಳು ಇಂದಿನ ತಲೆಮಾರಿಗೆ ಆದರ್ಶವಾಗಲಿ, ಅಸಮಾನತೆ ಅಳಿದು ಸಮತೆಯ ಸಮಾಜ ಸ್ಥಾಪನೆಯಾಗಲಿ ಎಂದು ಹಾರೈಸಿದರು.

ಬಳ್ಳಾರಿಯಲ್ಲಿ ಬಸವೇಶ್ವರ ಅವರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ನಗರದ ಹೆಚ್.ಆರ್.ಗವಿಯಪ್ಪ ವೃತ್ತದ ಬಳಿಯಿರುವ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಜಿಲ್ಲಾಡಳಿತದಿಂದ ಗೌರವ ನಮನ ಸಮರ್ಪಿಸಲಾಯಿತು.

ಈ ವೇಳೆ ಮಾತನಾಡಿದ ಪಾಲಿಕೆಯ ಮಹಾಪೌರ ಪಿ.ಗಾದೆಪ್ಪ, 12ನೇ ಶತಮಾನದಲ್ಲೇ ಸಮಾನತೆ, ಏಕತೆ ಮತ್ತು 'ಕಾಯಕವೇ ಕೈಲಾಸ' ಎಂಬ ಉದಾತ್ತ ತತ್ವಗಳನ್ನು ಸಾರಿದ ಮಹಾನ್ ಚೇತನರು. ಬಸವಣ್ಣನವರ ಹಾದಿಯಲ್ಲಿ ಇಂದು ನಾವೆಲ್ಲರೂ ಸಾಗಬೇಕಿದೆ ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಮಾತನಾಡಿ, ವಿಶ್ವಗುರು, ಶ್ರೇಷ್ಠ ವಚನಕಾರ ಹಾಗೂ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲ್ಪಟ್ಟಿರುವ ಬಸವಣ್ಣನವರ ಜನ್ಮ ದಿನೋತ್ಸವವನ್ನು ನಾಡಿನಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ, ಎಲ್ಲರನ್ನು ಒಂದೇ ಎಂಬ ಏಕತಾ ಭಾವಕ್ಕೆ ತಂದ ಪುಣ್ಯಾತ್ಮರು ಎಂದು ಬಣ್ಣಿಸಿದರು.

ರಾಯಚೂರಿನಲ್ಲೂ ಬಸವಣ್ಣನವರ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ವೀರಶೈವ ಲಿಂಗಾಯತ ಸಮಾಜದಿಂದ ಆಯೋಜಿಸಿದ್ದ ಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು, ಕೇಂದ್ರ ಸರ್ಕಾರ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಚುನಾವಣೆ ಸಮಯದಲ್ಲಿ ಮಹಿಳಾ ಮೀಸಲಾತಿ ರಾಜಕೀಯ ಲಾಭ ಪಡೆಯಲು ಈ ಕುತಂತ್ರ ಮಾಡುತ್ತಿದೆ. ಈ ನಡೆಯನ್ನು ಕೇವಲ ಕಾಂಗ್ರೆಸ್ ಮಾತ್ರವಲ್ಲದೆ, ದೇಶದ ಎಲ್ಲ ವಿರೋಧ ಪಕ್ಷಗಳು ಒಮ್ಮತದಿಂದ ವಿರೋಧ ವ್ಯಕ್ತಪಡಿಸಿವೆ ಎಂದರು.

ಗಂಗಾವತಿಯಲ್ಲಿ ಬಸವ ಜಯಂತಿ: ಬಸವ ಜಯಂತಿ ಅಂಗವಾಗಿ ಆನಗೊಂದಿ ರಸ್ತೆಯಲ್ಲಿರುವ ಬಸವೇಶ್ವರ ವೃತ್ತ ಹಾಗೂ ಕೃಷ್ಣದೇವರಾಯ ವೃತ್ತದಲ್ಲಿರುವ ಬಸವೇಶ್ವರ ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬಳಿಕ ಮಾತನಾಡಿದ ಶಾಸಕ ರೆಡ್ಡಿ, ಮೇಲು-ಕೀಳು, ಧನಿಕ-ಬಡವ, ಲಿಂಗತಾರತಮ್ಯ ರಹಿತ ಮತ್ತು ಮಹಿಳಾ ಸಮಾನತೆಯ ಸಮಾಜ ನಿರ್ಮಾಣ ಮಾಡುವ ಕನಸನ್ನು ಬಸವಣ್ಣನವರು 12ನೇ ಶತಮಾನದಲ್ಲಿಯೇ ಕಂಡಿದ್ದಾರೆ. ಆದರೆ, ಮಹಿಳಾ ಮೀಸಲಾತಿಯ ಬಿಲ್‌ಗೆ ವಿರೋಧ ಮಾಡುವ ಮೂಲಕ ಕಾಂಗ್ರೆಸ್ ಕೇವಲ ಮಹಿಳಾ ವಿರೋಧಿ ಮಾತ್ರವಲ್ಲ, ಬಸವಣ್ಣನ ವಿಚಾರಧಾರೆಗಳ ವಿರೋಧಿಯೂ ಆಗಿದೆ ಎಂದು ಟೀಕಿಸಿದರು.

3 ನೇ ಪುಟಕ್ಕೆ

ಜಮ್ಮು-ಕಾಶ್ಮೀರದ ಉಧಮ್‌ಪುರದಲ್ಲಿ ಘೋರ ಬಸ್ ದುರಂತ: 21ಕ್ಕೇರಿದ ಸಾವು, 61 ಮಂದಿಗೆ ಗಾಯ



ಉಧಮ್‌ಪುರ(ಜಮ್ಮು ಮತ್ತು ಕಾಶ್ಮೀರ): ಇಲ್ಲಿನ ಉಧಮ್‌ಪುರದ ಕನೋಟ್ ಗ್ರಾಮದಲ್ಲಿ ಸರ್ಕಾರಿ ಬಸ್ಸೊಂದು ಕಂದಕಕ್ಕೆ ಉರುಳಿ ಬಿದ್ದು 21 ಮಂದಿ ಸಾವಿಗೀಡಾಗಿದ್ದಾರೆ. 61 ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಓರ್ವ ವ್ಯಕ್ತಿಯ ಸ್ಥಿತಿ ತೀವ್ರ ಗಂಭೀರವಾಗಿದ್ದು, ಅವರನ್ನು ವಿಮಾನದ ಮೂಲಕ ಜಮ್ಮುವಿನಲ್ಲಿನ ಆಸ್ಪತ್ರೆಗೆ ರವಾನಿಸಲಾಗಿದೆ.

ಅಧಿಕಾರಿಗಳು ನೀಡಿದ ಮಾಹಿತಿ ಪ್ರಕಾರ, ಸರ್ಕಾರಿ ಬಸ್ ರಾಮನಗರದಿಂದ ಉಧಮ್‌ಪುರಕ್ಕೆ ಹೋಗುತ್ತಿತ್ತು. ಕನೋಟ್ ಗ್ರಾಮದ ಬಳಿಕ ಸಂಚರಿಸುತ್ತಿದ್ದಾಗ ನಿಯಂತ್ರಣ ತಪ್ಪಿ ಕಂದಕಕ್ಕೆ ಬಿದ್ದಿದೆ. ಇದರಿಂದ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದೆ. ಬಸ್‌ನಲ್ಲಿ ಎಷ್ಟು ಜನರಿದ್ದರು ಎಂಬ ಬಗ್ಗೆ ನಿಖರ ಮಾಹಿತಿ ಗೊತ್ತಾಗಿಲ್ಲ ಎಂದು ತಿಳಿಸಿದ್ದಾರೆ.

ಉಧಮ್‌ಪುರ ಪೊಲೀಸರು ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದು, ರಾಮನಗರ-ಉಧಮ್‌ಪುರ ಮಾರ್ಗದಲ್ಲಿ ಸರ್ಕಾರಿ ಬಸ್ ದುರಂತಕ್ಕೀಡಾಗಿದೆ. ಡಿಐಜಿ ಯು-ಆರ್ ರೇಂಜ್, ಎಸ್‌ಎಸ್‌ಪಿ ಉಧಮ್‌ಪುರ ಮತ್ತು ಇತರ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳದಲ್ಲಿದ್ದಾರೆ. ರಕ್ಷಣಾ ಕಾರ್ಯಾಚರಣೆಗಳನ್ನು ಪ್ರಾರಂಭಿಸಲಾಗಿದೆ. ಅಗತ್ಯ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸಚಿವರಿಂದ ಸಂತಾಪ: ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ಉಧಮ್‌ಪುರ ಉಪ ಆಯುಕ್ತ ಮಿಂಗಾ ಶೆರ್ಪಾ ಅವರೊಂದಿಗೆ ಮಾತನಾಡಿ ಪರಿಸ್ಥಿತಿಯ ಬಗ್ಗೆ ನಿಗಾ ವಹಿಸಿದ್ದಾರೆ. ಅಲ್ಲದೇ, ಗಂಭೀರವಾಗಿ ಗಾಯಗೊಂಡವರಿಗೆ ತಕ್ಷಣದ ಚಿಕಿತ್ಸೆ ಒದಗಿಸಲು ವಿಮಾನದಲ್ಲಿ ಸಾಗಿಸಲು ವ್ಯವಸ್ಥೆ ಮಾಡುವಂತೆ ಸೂಚಿಸಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಪೋಸ್ಟ್ ಹಂಚಿಕೊಂಡಿದ್ದು, ಉಧಮ್‌ಪುರದ ಬಳಿ ಘೋರ ಬಸ್ ದುರಂತ ಸಂಭವಿಸಿದೆ. ಭಾರೀ ಸಾವು-ನೋವು ನಡೆದಿದೆ. ಅಪಘಾತದಲ್ಲಿ ಬದುಕುಳಿದವರನ್ನು ರಕ್ಷಿಸಲು ಅಗತ್ಯ ಕಾರ್ಯಾಚರಣೆ ನಡೆಯುತ್ತಿದೆ. ಎಲ್ಲಾ ನೆರವು ಒದಗಿಸಲಾಗುತ್ತಿದೆ. ಗಂಭೀರವಾಗಿ ಗಾಯಗೊಂಡವರನ್ನು ವಿಮಾನದಲ್ಲಿ ಸಾಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಅದ್ದೂರಿ ಆಚರಣೆ: ಭಕ್ತಿಭಾವದಿಂದ ಪುತ್ಥಳಿಗೆ ಮಾಲಾರ್ಪಣೆ





ರಾಯಚೂರು, ಏ.20

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ರಾಯಚೂರು ಮಹಾನಗರ ಪಾಲಿಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಯಚೂರು ರಾಯಚೂರು ಜಿಲ್ಲಾ ವೀರಶೈವ ಲಿಂಗಾಯತ ಸಮಾಜ ಹಾಗೂ ಲಿಂಗ ನಂಸ್ಥೆಗಳು

ಸಂಯುಕ್ತ ಆಶ್ರಯದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ನಗರದಲ್ಲಿ ಅತ್ಯಂತ ಸಂಭ್ರಮ-ಸಡಗರದಿಂದ ಆಚರಿಸಲಾಯಿತು. ಬಸವೇಶ್ವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಕ್ತಿಭಾವದ ವಾತಾವರಣ ನಿರ್ಮಾಣವಾಗಿದ್ದು, ವಿವಿಧ ಗಣ್ಯರು ಬಸವೇಶ್ವರರ ಪುತ್ಥಳಿಗೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು.

ಕಾರ್ಯಕ್ರಮದ ಅಂಗವಾಗಿ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಗಿದ್ದು, ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು, ವಿದ್ಯಾರ್ಥಿಗಳು, ಮಹಿಳಾ ಮಂಡಳಿಗಳು ಹಾಗೂ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಡೊಳ್ಳು-ಕುಣಿತ, ಮೆರವಣಿಗೆಗೆ ವಿಶೇಷ ಆಕರ್ಷಣೆಯಾಯಿತು. ಬಸವೇಶ್ವರರ ತತ್ವಗಳನ್ನು ಸಾರುವ ಘೋಷಣೆಗಳು ನಗರದೆಲ್ಲೆಡೆ ಮೊಳಗಿದವು.

ಈ ಸಂದರ್ಭದಲ್ಲಿ ಸೋಮವಾರಪೇಟ ರಾಚೋಟ್ ಸ್ವಾಮೀಜಿ, ಸಚಿವ ಎನ್.ಎಸ್. ಬೋಸರಾಜು, ರಾಯಚೂರು ನಗರ ಕ್ಷೇತ್ರದ ಶಾಸಕ ಡಾ. ಶಿವರಾಜ ಎಸ್. ಪಾಟೀಲ್, ಜಿಲ್ಲಾಧಿಕಾರಿ ಕೆ. ನಿತೀಶ್, ಮಹಾನಗರ ಪಾಲಿಕೆ ಆಯುಕ್ತ ಜುಬೀನ್ ಮೊಹಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಸಹಾಯಕ ಆಯುಕ್ತ ಡಾ. ಹಂಪಣ್ಣ ಸಜ್ಜನ್ ಹಾಗೂ ತಹಶೀಲ್ದಾರ್ ಸುರೇಶ್ ವರ್ಮ ಅ. ಭ. ವೀ. ಲಿಂ ಮ ಸಭಾ ಅಧ್ಯಕ್ಷರು ಚಂದ್ರಶೇಖರ್ ಪಾಟೀಲ್ ಮಿರ್ಜಾಪುರ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಇದೇ ವೇಳೆ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶವಂತಗೇರ, ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಜಯಂತಿಯನ್ನು ಯಶಸ್ವಿಗೊಳಿಸಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಬಸವೇಶ್ವರರ ಸಮಾನತೆ, ಶ್ರಮದ ಮಹತ್ವ ಹಾಗೂ ಸಮಾಜ ಸುಧಾರಣೆಯ ಸಂದೇಶಗಳನ್ನು ಸಾರಲಾಗಿದ್ದು, ಯುವಜನತೆಗೆ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಲಾಯಿತು. ನಗರದಲ್ಲಿ ದಿನಪೂರ್ತಿ ಹಬ್ಬದ ಸಂಭ್ರಮ ಮನೆಮಾಡಿದ್ದು, ಎಲ್ಲೆಡೆ ಬಸವಣ್ಣನ ಜಯಘೋಷಗಳು ಕೇಳಿಬಂದವು..

ರಾಯಚೂರು: ಬಸವಣ್ಣ ಮಹಾನ್ ಸಾಮಾಜಿಕ ಸುಧಾರಕ: ನಿತೀಶ್ ಕೆ

ಜಾತಿ ಶೋಷಣೆ, ಮೂಢನಂಬಿಕೆ ವಿರುದ್ಧ ಹೋರಾಡಿದ ಕ್ರಾಂತಿಯೋಗಿ

ರಾಯಚೂರು,ಏ.20-



ಕರ್ನಾಟಕ ಕಂಡ ಮಹಾನ್ ಸಾಮಾಜಿಕ ಸುಧಾರಕ ಬಸವಣ್ಣ ಜಾತಿ ವ್ಯವಸ್ಥೆ, ಶೋಷಣೆ, ಮೂಢನಂಬಿಕೆ ವಿರುದ್ಧ ಹೋರಾಡಿ ಸಮಾಜ ಸುಧಾರಣೆಯ ತತ್ವಗಳನ್ನು ಎಂದಿಗೂ ಬಿಡಲಿಲ್ಲ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ ಹೇಳಿದರು.

ಶುಕ್ರವಾರ ನಗರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಬಸವಣ್ಣ ಅಂತರ್ಜಾತಿ ವಿವಾಹ ಮಾಡಿಸಿ ಜಾತಿ ವ್ಯವಸ್ಥೆಯ ವಿರುದ್ಧ ಮಹತ್ತರ ಹೆಜ್ಜೆ ಇಟ್ಟರು. ಅಸಮಾನತೆ ವಿರುದ್ಧ ಹೋರಾಡಿ ಶೋಷಿತರ ಬಾಳಿಗೆ ಬೆಳಕಾದರು'' ಎಂದು ಸ್ಮರಿಸಿದರು.

''ದೇವರ ಪೂಜೆಗಿಂತ ಕಾಯಕದ ಪೂಜೆ ಮೇಲು ಎಂದು ಸಾರಿದ ಬಸವಣ್ಣನವರ ತತ್ವಗಳು ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಇಂದಿಗೂ ಅಗತ್ಯವಾಗಿವೆ. ಯುವಕರು ಶ್ರಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು'' ಎಂದು ಕರೆ ನೀಡಿದರು.

''ದಾಸೋಹ ತತ್ವವನ್ನು ಜಗತ್ತಿಗೆ ಪರಿಚಯಿಸಿದ ಬಸವಣ್ಣ, ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಚರ್ಚೆ, ಆಲೋಚನೆಗೆ ಅವಕಾಶ ಮಾಡಿಕೊಟ್ಟಿದ್ದು ಅವರ ದೂರದೃಷ್ಟಿಗೆ ಸಾಕ್ಷಿ'' ಎಂದು ಜಿಲ್ಲಾಧಿಕಾರಿ ಬಣ್ಣಿಸಿದರು.

ವಿಶ್ವಗುರು ಬಸವಣ್ಣ ಜಗತ್ತಿನ ಅದ್ಭುತ - ಹಾಜಿಚೌದ್ರಿ



ಸಿರವಾರ.ಏ.20-

ವಿಶ್ವಗುರು ಬಸವಣ್ಣ ಜಗತ್ತಿನ ಅದ್ಭುತ. ಜಗತ್ತಿನಲ್ಲಿ ಹೆಣ್ಣು, ಹೊನ್ನು, ಮಣ್ಣಿಗಾಗಿ ಅನೇಕ ರಕ್ತಕ್ರಾಂತಿಗಳು ನಡೆದಿವೆ. ಬಸವಣ್ಣನವರ ಅಧ್ಯಕ್ಷತೆಯಲ್ಲಿ ಸಮಾಜೋ ಧಾರ್ಮಿಕ ಕ್ರಾಂತಿ ನಡೆಯಿತು. ಅದು ಸಮಸಮಾಜ ನಿರ್ಮಾಣಕ್ಕೆ ನಡೆದ ಏಕೈಕ ಕ್ರಾಂತಿ ಕಲ್ಯಾಣ ಕ್ರಾಂತಿ ಎಂದು ಪ.ಪಂಚಾಯತಿ ಅಧ್ಯಕ್ಷ ಹಾಜಿಚೌದ್ರಿ, ಬಣ್ಣಿಸಿದರು. ಪಟ್ಟಣ ಪಂಚಾಯತಿಯಲ್ಲಿ ವಿಶ್ವ ಗುರು ಬಸವಣ್ಣ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಣೆ ಮಾಡಲಾಯಿತು. ಮಾಜಿ ಅಧ್ಯಕ್ಷ ವೈ.ಭೂಪನಗೌಡ ಮಾತನಾಡಿ ಬಸವಣ್ಣನವರು ಸಮಸಮಾಜ ನಿರ್ಮಾಣದ ಕನಸು ಕಂಡಿದ್ದರು. ಅದರ ಸಾಕಾರಕ್ಕೆ ಅವರು ತೋರಿದ ದಾರಿಯಲ್ಲಿ ಸಂಘಟಿತರಾಗಿ ನಡೆಯೋಣ. ವ್ಯಸನಗಳ ಮುಕ್ತ ಸಮಾಜ ನಿರ್ಮಿಸೋಣ. ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡೋಣ ಎಂದರು. ಕಸಾಪ ನಿಕಟಪೂರ್ವ ಅಧ್ಯಕ್ಷ. ಸುರೇಶ ಹೀರಾ ಮಾತನಾಡಿ ವಿಶ್ವಗುರು ಬಸವಣ್ಣ ಮಾನವೀಯತೆ ಸಾರಿದ ಸಮಾನತೆಯ ಹರಿಕಾರರು.

3 ನೇ ಪುಟಕ್ಕೆ

ಜನಗಣತಿ ಸಿಬ್ಬಂದಿಗಳಿಗೆ ಓ.ಆರ್.ಎಸ್. ಪ್ಯಾಕೆಟ್ ವಿತರಣೆ: ಬೇಸಿಗೆ ಬಿಸಿಲಲ್ಲಿ ಆರೋಗ್ಯ ಕಾಪಾಡಲು ಮುನ್ನೆಚ್ಚರಿಕೆ

ರಾಯಚೂರು, ಏ. 20: ರಾಷ್ಟ್ರೀಯ ಜನಗಣತಿ ಕಾರ್ಯಕ್ಕೆ



ನಿಯೋಜನೆಗೊಂಡ ಸಿಬ್ಬಂದಿಗಳಿಗೆ ರಾಯಚೂರು ಮಹಾನಗರ ಪಾಲಿಕೆ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಹಾಗೂ ಐಎಂಎ ರಾಯಚೂರು ವತಿಯಿಂದ ಸೋಮವಾರ ಓ.ಆರ್.ಎಸ್. ಪ್ಯಾಕೆಟ್‌ಗಳನ್ನು ವಿತರಿಸಲಾಯಿತು.

ನಗರದ ಹಳೆ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ, ರಾಯಚೂರಿನಲ್ಲಿ ಬೇಸಿಗೆ ಬಿಸಿಲಿನ ತೀವ್ರತೆ ಹೆಚ್ಚಾಗಿದೆ. ಮನೆ-ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಗಣತಿದಾರರ ಆರೋಗ್ಯ ದೃಷ್ಟಿಯಿಂದ ಓ.ಆರ್.ಎಸ್. ಪ್ಯಾಕೆಟ್‌ಗಳು ಸಹಕಾರಿಯಾಗಲಿವೆ ಎಂದರು.

ಗಣತಿದಾರರಿಗೆ ಸೂಚನೆ ನೀಡಿದ ಅವರು, ಜನಗಣತಿ ಕಾರ್ಯವನ್ನು ಕ್ರಮಬದ್ಧ ಹಾಗೂ ಶಿಸ್ತಿನಿಂದ ನಿರ್ವಹಿಸಬೇಕು. ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಮೂಲ ರಸ್ತೆಯಿಂದಲೇ ಕಾರ್ಯ ಆರಂಭಿಸಿ, ಪ್ರತಿ ಮನೆ ಹಾಗೂ ಪ್ರಮುಖ ಗುರುತುಗಳನ್ನು ಕಡ್ಡಾಯವಾಗಿ ದಾಖಲಿಸಬೇಕು ಎಂದು ತಿಳಿಸಿದರು. ಸಾರ್ವಜನಿಕರು ಕೂಡ ಗಣತಿದಾರರಿಗೆ ಸಮಗ್ರ ಹಾಗೂ ನಿಖರ ಮಾಹಿತಿ ನೀಡಿ ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ, ಪಾಲಿಕೆಯ ಕಂದಾಯ ಅಧಿಕಾರಿ ರವಿ ಅಂಗಡಿ, ಜಿಲ್ಲಾ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಎಸ್. ಕಮಲ್ ಕುಮಾರ್, ಐಎಂಎ ಅಧ್ಯಕ್ಷ ಡಾ. ಶೈಲೇಶ್ ಅಮರಖೇಡ್, ದಿನೇಶ್ ದಫ್ತಾರಿ, ಬಿ. ಮೋಹನ್, ಕೆ.ವಿ. ಮನೋಹರ, ಜಗದೀಶ್ ಗುಪ್ತಾ, ಈರಣ್ಣ ಚಿತ್ರಗಾರ್, ಪತಂಗ ವಸಂತ್ ಕುಮಾರ್, ವೆಂಕಟರಾಜ್ ಗುಪ್ತಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕುಡಿಯುವ ನೀರು ಸಮಸ್ಯೆ ಉಲ್ಬಣಿಸದಂತೆ ಕಟ್ಟುನಿಟ್ಟಿನ ಕ್ರಮ : ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ

17 ಕೋಟಿ ಅನುದಾನದಲ್ಲಿ ಮುಷ್ಠೂರು, ಜೀನೂರು, ಬಲ್ಲಟಗಿ ಸೇತುವೆ ನಿರ್ಮಾಣ ಬೋಸರಾಜು

ಮಾನ್ವಿ: ರಾಜ್ಯ ಸರ್ಕಾರದಿಂದ ಅಮೃತ ನಗರೋತ್ಥಾನ ಯೋಜನೆ ಹಾಗೂ ಸಿಎಂಐಡಿಪಿ ಯೋಜನೆಯಡಿ ಮಂಜೂರಾಗಿರುವ 5.25 ಕೋಟಿ ವೆಚ್ಚದಲ್ಲಿ ಪಟ್ಟಣದ ಎಲ್ಲಾ ವಾರ್ಡುಗಳಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣದ ಕಾಮಗಾರಿಗಳು ಹಾಗೂ ವಿವಿಧ ಸಮುದಾಯದಗಳ ಬೇಡಿಕೆಗಳನುಸಾರ ಸಮುದಾಯ ಭವನಗಳ ನಿರ್ಮಾಣ ಮತ್ತು ಇತರೆ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದು ಸಣ್ಣ ನೀರಾವರಿ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ತಿಳಿಸಿದರು. ಪಟ್ಟಣದ ವಿವಿಧ ವಾರ್ಡುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ನಂತರ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ರಾಘವೇಂದ್ರ ಮಠದ ರಾಘವೇಂದ್ರ ಗುರೂಜಿ ಸಮುದಾಯ ಭವನದ, ವೀರಶೈವ ಸಮಾಜ ಸಮುದಾಯ ಭವನ, ಕಾಕತೀಯ ಶಾಲೆ ಸಮುದಾಯ ಭವನ, ಗಂಗಾಮತಸ್ಥ ಸಮಾಜದ ಸಮುದಾಯ ಭವನ, ಯಾದವ ಸಮಾಜದ ಸಮುದಾಯ ಭವನದ ನಿರ್ಮಾಣ, ಸಣ್ಣ ಖುರೇಷಿ, ದೊಡ್ಡ ಖುರೇಶಿ, ನೇಕಾರ ಸಮಾಜದ ಸಮುದಾಯ ಭವನದ ನಿರ್ಮಾಣ ಹಾಗೂ ವಾರ್ಡ್ ನಂ: 10 ರಲ್ಲಿ ರಬ್ಬಣಕಲ್ ಮುಖ್ಯ ರಸ್ತೆಯಿಂದ ಈಶ್ವರಿ ದೇವಸ್ಥಾನವರಗೆ ಸೇರಿದಂತೆ ವಿವಿಧ ವಾರ್ಡುಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳನ್ನು



ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು. ಅದೇರೀತಿ ಈ ಕ್ಷೇತ್ರದ ಜನರ ಬಹುದಿನದ ಬೇಡಿಕೆಯಾದ ಮುಷ್ಠೂರು ಸೇತುವೆ ನಿರ್ಮಾಣಕ್ಕೆ 11.ಕೋಟಿ ಹಾಗೂ ರಾಜ್ಯ ಹೆದ್ದಾರಿ 14 ರ ವ್ಯಾಪ್ತಿಯಲ್ಲಿ ಬರುವ ಜೀನೂರು ಬಳಿ ಸೇತುವೆ ನಿರ್ಮಾಣಕ್ಕೆ 5.50 ಕೋಟಿ ಮತ್ತು ಬಲ್ಲಟಗಿ ಬಳಿ ಸೇತುವೆ ನಿರ್ಮಾಣಕ್ಕೆ 50 ಲಕ್ಷ ರೂ.ಗಳ ಅನುದಾನಕ್ಕೆ ಮಂಜೂರಾತಿ ದೊರೆಕಿದ್ದು ಶೀಘ್ರದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತದೆ ಎಂದು ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ಕುಡಿಯುವ ನೀರಿಗೆ ಕ್ರಮ : ಈಗಾಗಲೇ ಜಿಲ್ಲೆಯಲ್ಲಿ ನಡೆಸಿದ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾನ್ವಿ ಸೇರಿದಂತೆ ಜಿಲ್ಲೆಯಾದ್ಯಂತ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸದಂತೆ ತಡೆಯಲು

3 ನೇ ಪುಟಕ್ಕೆ

ಎ.22ರಂದು ಸಿ.ಯು.ಕೆ 10ನೇ ಘಟಿಕೋತ್ಸವ; 769 ಅಭ್ಯರ್ಥಿಗಳಿಗೆ ಪದವಿ ಪ್ರದಾನ: ಪ್ರೊ.ಬಟ್ಟು ಸತ್ಯನಾರಾಯಣ

ಕಲಬುರಗಿ,ಏ.20-

ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸ ವ ಎ.22 ರಂದು ವಿ.ವಿ. ಕ್ಯಾಂಪಸ್ ನಲ್ಲಿ ಆಯೋಜಿಸಿದ್ದು, ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸ ವದ ಭಾಷಣ ಮಾಡಲಿದ್ದಾರೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ಶನಿವಾರ ಕಡಗಂಚಿಯಲ್ಲಿರುವ ವಿ.ವಿ.ಯ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2.30 ಗಂಟೆಗೆ ವಿ.ವಿ. ಬಹುಪಯೋಗಿ ಸಭಾಂಗಣದಲ್ಲಿ ಘಟಿಕೋತ್ಸ ವ ನಡೆಯಲಿದ್ದು, ಕರ್ನಾಟಕದ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಸಹ ಭಾಗಿಯಾಗಲಿದ್ದಾರೆ ಎಂದರು.

ಕಾರ್ಯಕ್ರಮಕ್ಕೆ ಉಪ ರಾಷ್ಟ್ರಪತಿಗಳ ಆಗಮಿಸುತ್ತಿರುವುದರಿಂದ ಹೆಚ್ಚಿನ ಭದ್ರತಾ ವ್ಯವಸ್ಥೆ ಮಾಡಲಾಗಿದ್ದು, ಶಿಷ್ಟಾಚಾರದಂತೆ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ, ಅಧಿಕಾರಿ ವರ್ಗದವರು, ಪಾಲಕರು ಕಡ್ಡಾಯವಾಗಿ ಗುರುತಿನ ಚೀಟಿಯೊಂದಿಗೆ ಭಾಗವಹಿಸಬೇಕು. ಘಟಿಕೋತ್ಸ ವದ ಯಶಸ್ವಿಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪ್ರೊ.ಬಟ್ಟು ಸತ್ಯನಾರಾಯಣ ತಿಳಿಸಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ದೇಶದಲ್ಲಿಯೆ ಮುಂಚೂಣಿಯಾಗಿ ಬೆಳೆಯುತ್ತಿರುವ ವಿ.ವಿ.ಗಳಲ್ಲಿ ಒಂದಾಗಿದೆ. 34 ವಿಭಾಗಗಳನ್ನು ಹೊಂದಿದ್ದು,

34 ಯು.ಜಿ, 15 ಪಿ.ಜಿ. ಕೋರ್ಸ್ ಬೋಧನೆ ಮಾಡಲಾಗುತ್ತಿದೆ. ಪ್ರಸಕ್ತ 2026-27ರಿಂದ ಮತ್ತೆ 5 ಹೊಸ ಪದವಿ ಕೋರ್ಸ್ ಆರಂಭಿಸಲಾಗಿದೆ. ಪ್ರಸ್ತುತ ಸುಮಾರು 3,200 ವಿದ್ಯಾರ್ಥಿಗಳಿದ್ದು, 213 ಬೋಧಕ ಮತ್ತು 110 ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿ.ವಿ.ಯ ಗುಣಮಟ್ಟ



ಶಿಕ್ಷಣ ಅಳತೆಗೆ ಅಲ್ಲಿನ ಬೋಧಕ ಸಿಬ್ಬಂದಿಗಳ ಪ್ರಾಜೆಕ್ಟ್ ಮೇಲೆ ಅವಲಂಬಿತವಾಗಿದ್ದು, ತಾವು ಅಧಿಕಾರ ವಹಿಸಿದ್ದಾಗ 100 ಜನ ಇದ್ದ ಸಂಶೋಧನಾ ಅಭ್ಯರ್ಥಿಗಳ ಸಂಖ್ಯೆ ಇದೀಗ 450ಕ್ಕೆ ತಲುಪಿದೆ. ಹೊಸದಾಗಿ ಎರಡು ವಸತಿ ನಿಲಯ ಸ್ಥಾಪಿಸಿದ್ದು, ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಬೇಕಾದ ಎಲ್ಲಾ ಪೂರಕ ವಾತಾವರಣ ಇಲ್ಲಿ ನಿರ್ಮಿಸಲಾಗಿದೆ. ಜಮ್ಮು ಕಾಶ್ಮೀರ, ಈಶಾನ್ಯ ರಾಜ್ಯಗಳಿಂದ ಸಹ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ ಎಂದರು.

ಸೋಮವಾರದಿಂದಲೆ ಪಿ.ಜಿ ಪರೀಕ್ಷೆ ನಡೆಯಲಿದ್ದು, ಮೇ 8ಕ್ಕೆ ಮುಗಿಯಲಿದೆ. ಮೇ ಅಂತ್ಯಕ್ಕೆ ಫಲಿತಾಂಶ ಘೋಷಿಸಲಾಗುವುದು. ವಿ.ವಿ ಕ್ಯಾಂಪಸ್ ನಲ್ಲಿ ನೀರಿನ ಸಮಸ್ಯೆ ಪರಿಹಾರಕ್ಕೆ ಅಮರ್ಜಾ ಅಲ್ಲದೆ ಪರ್ಯಾಯ ವ್ಯವಸ್ಥೆಯತ್ತವು ನಾವು ಹೆಜ್ಜೆ ಇಟ್ಟಿದ್ದೇವೆ. ಅಂತರ್ಜಲ ಹೆಚ್ಚಳಕ್ಕೆ ಮತ್ತು ಹಸರಿಕರಣಕ್ಕೆ ಆದ್ಯತೆ ನೀಡಿದ್ದು, ಇದಕ್ಕಾಗಿ ಸಿ.ಎಸ್.ಆರ್. ನಿಧಿಯಡಿ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಮುಂದಿನ 4-5 ವರ್ಷದಲ್ಲಿ ಕ್ಯಾಂಪಸ್ ಗಿಡಗಳಿಂದ ತುಂಬಿರಲಿದೆ ಎಂದರು.

24 ಜನರಿಗೆ ಪಿ.ಎಚ್.ಡಿ ಪ್ರದಾನ :

ವಿಶ್ವವಿದ್ಯಾಲಯದ 10ನೇ ಘಟಿಕೋತ್ಸ ವದಲ್ಲಿ ಸುಮಾರು 769 ಜನ ಅಭ್ಯರ್ಥಿಗಳು ಒದವಿ ಒಡೆಯಲು ಅರ್ಹರಾಗಿದ್ದಾರೆ. ಇದರಲ್ಲಿ 197 ಜನ ಪದವಿ, 547 ಜನ ಸ್ನಾತಕೋತ್ತರ ಪದವಿ, 24 ಜನ ಪಿ.ಎಚ್.ಡಿ ಹಾಗು ಓರ್ವ ಅಭ್ಯರ್ಥಿ ಎಂ.ಫಿಲ್ ಪದವಿಗೆ ಅರ್ಹರಾಗಿದ್ದಾರೆ. ಇದರಲ್ಲಿ ಒಟ್ಟಾರೆ 460 ಅಭ್ಯರ್ಥಿಗಳು ಖುದ್ದಾಗಿ ಭಾಗವಹಿಸಿ ಘಟಿಕೋತ್ಸ ವದ ಪ್ರಮಾಣ ಪತ್ರ ಪಡೆಯಲು ಒಪ್ಪಿಗೆ ಸೂಚಿಸಿದ್ದಾರೆ.

ಇನ್ನುಳಿದಂತೆ ಆಯಾ ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದ 22 ಜನರಿಗೆ ಚಿನ್ನದ ಪದಕ ನೀಡಲಾಗುತ್ತಿದ್ದು, ಮಧ್ಯಪ್ರದೇಶ ಮೂಲದ ಬಿ.ಟೆಕ್ ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಶನ್ಸ್ ಇಂಜಿನೀಯರಿಂಗ್ ವಿದ್ಯಾರ್ಥಿನಿ ದಿವ್ಯಾಂಶು ಸಕ್ಸೇನಾ ಅವರು ಪ್ರೊ. ಎ.ಎಂ.ಪಠಾನ್ ಚಿನ್ನದ ಪದಕಕ್ಕೆ ಭಾಜನರಾಗಿದ್ದು ಬುಧವಾರ ಜರುಗುವ ಘಟಿಕೋತ್ಸ ವದಲ್ಲಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರೊ. ಬಟ್ಟು ಸತ್ಯನಾರಾಯಣ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ. ಭರತ ಕುಮಾರ ಸಹಾಯಕ ರಿಜಿಸ್ಟರ್ ಶ್ರವಣ, ಪಿ.ಆರ್.ಓ ಡಾ. ಗಣಪತಿ ಸಿನ್ನೂರ, ಎ.ಪಿ.ಆರ್.ಓ ಡಾ.ಪ್ರಕಾಶ ಬಾಳಿಕಾಯಿ, ಡಾ. ಸಾಯಿಕೃಷ್ಣ, ಡಾ. ಶಾಮಲಾ, ಪ್ರೊ. ಬಸವರಾಜ ಕುಬಕಡ್ಡಿ, ಡಾ.ಜೋಹೆರ ಡಾ.ಶ್ರೀಲಕ್ಷ್ಮೀ ಇದ್ದರು.



ಎಮ್ಮಿಗನೂರಿನಲ್ಲಿ ಉಚಿತ ಕರಾಟೆ ಸಮವಸ್ತ್ರ ವಿತರಣೆ

ಬಳ್ಳಾರಿ / ಕಂಪ್ಲಿ,ಏ.20-

ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಡಾ. ಅಬ್ದುಲ್ ಕಲಾಂ ಎಸ್ಪಿ ಚಾರಿಟಬಲ್ ಫೌಂಡೇಶನ್ ವತಿಯಿಂದ ಮಕ್ಕಳಿಗೆ ಉಚಿತ ಕರಾಟೆ ಸಮವಸ್ತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಫೌಂಡೇಶನ್ ಕಾರ್ಯದರ್ಶಿ ಎಚ್. ಪೀರಾವಲಿ ಮಾತನಾಡಿ, ಅನಾಥ ಹೆಣ್ಣುಮಕ್ಕಳು ಹಾಗೂ ವಿಶೇಷಚೇತನ ಕುಟುಂಬಗಳ ಮಕ್ಕಳಿಗೆ ಉಚಿತ ಕರಾಟೆ ತರಬೇತಿ ನೀಡುವುದರ ಜೊತೆಗೆ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ ಎಂದು ಹೇಳಿದರು. ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸ್ವಯಂರಕ್ಷಣೆ ಕೌಶಲ್ಯ ಬೆಳೆಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು.

ರೈತ ಮುಖಂಡ ಜಿ. ನಾಗರೆಡ್ಡಿ ಮಾತನಾಡಿ, ಇಂದಿನ ಪರಿಸ್ಥಿತಿಯಲ್ಲಿ ಯುವಕಯುವತಿಯರು ಆತ್ಮರಕ್ಷಣೆಗೆ ಕರಾಟೆ ಕಲಿಯುವುದು ಅತ್ಯಾವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ ವಡ್ಡರ ವೀರೇಶ್, ರಾಜಪ್ಪ ಜಡೇಶ್ವರಡ್ಡಿ, ನಾರಾಯಣ, ಬಿ. ರಾಜ, ಎಸ್. ರಾಮಪ್ಪ, ಸಾಧಿಕ್ ಅಲಿ ಸಾಬ್, ಪರಶುರಾಮ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕನ್ನಡ ಭವನದಲ್ಲಿ ಸಾಂಸ್ಕೃತಿಕ ಮಹೋತ್ಸವ

ಕಲಬುರಗಿ,ಏ.20-

ನಗರದ ಕನ್ನಡ ಭವನದಲ್ಲಿ ಕಲ್ಯಾಣ ನಾಡಿನ ಸಾಂಸ್ಕೃತಿಕ ಕಲಾ ಬಳಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ನಾಗಲಿಂಗಯ್ಯ ಮಠಪತಿ ಉದ್ಘಾಟಿಸಿ ಮಾತನಾಡಿ, ಸಂಗೀತವು ಮನುಷ್ಯನ ಭವಿಷ್ಯವನ್ನೇ ಬದಲಾಯಿಸುವ ಶಕ್ತಿ ಹೊಂದಿದೆ ಎಂದು ಹೇಳಿದರು.

ನಾಡಿಗೆ ಪುಟ್ಟರಾಜ ಗವಾಯಿಗಳ ಕೊಡುಗೆ ಅಪಾರವಾಗಿದ್ದು, ಅನೇಕ ಪ್ರತಿಭಾವಂತ ಕಲಾವಿದರು ಇನ್ನೂ ಗುರುತಿಸಬೇಕಿರುವುದು ನಮ್ಮ ಕರ್ತವ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಾನಿಧ್ಯ ವಹಿಸಿದ್ದ ಪ.ಪೂ. ರೇವಣಸಿದ್ದ ಶಿವಾಚಾರ್ಯ ಆಶೀರ್ವಚನ ನೀಡಿ, ಪುರಂದರದಾಸರು, ಕನಕದಾಸರು ಸೇರಿದಂತೆ ಅನೇಕ ಸಂತರು ಸಂಗೀತದ ಮೂಲಕ ಮೋಕ್ಷ ಪಡೆದಿರುವ ಇತಿಹಾಸವಿದೆ ಎಂದು ಹೇಳಿದರು.

ಸಂಗೀತ ಕ್ಷೇತ್ರವು ಮನಸ್ಸಿಗೆ ಆನಂದ, ತೃಪ್ತಿ ಹಾಗೂ ಆಯುಷ್ಯ ವೃದ್ಧಿ ನೀಡುವ ಮಹತ್ವದ ಕ್ಷೇತ್ರವಾಗಿದ್ದು, ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವುದು ಅಗತ್ಯ ಎಂದರು.

ಅತಿಥಿಯಾಗಿ ಭಾಗವಹಿಸಿದ ದೇವಿಂದ್ರಪ್ಪ ಮುಡುಬುಳ, ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿರುವುದು ಭಾಗ್ಯ ಎಂದು ತಿಳಿಸಿ, ಕಲಾ ಬಳಗದ ಕಾರ್ಯಕ್ಕೆ ಕೃತಜ್ಞತೆ ಸಲ್ಲಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉದ್ಯಮಿ ಸೋಮಶೇಖರ ತೆಂಗಳಿ ಮಾತನಾಡಿ, ಕಲೆ ಮತ್ತು ಸಂಸ್ಕೃತಿ ಜೀವನದಲ್ಲಿ ವಿಶೇಷ ಸ್ಥಾನ ಹೊಂದಿದ್ದು, ಅನನ್ಯಾರ ಭರತನಾಟ್ಯ ಪ್ರದರ್ಶನ ಮನಸ್ಸಿಗೆ ರೋಮಾಂಚಕಾರಿಯಾಗಿ ಅನುಭವವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ವಿಜಯಕುಮಾರ್ ತೆಗಲ ತಿಪ್ಪಿ, ಸತೀಶ್ ಪಾಟೀಲ್ ಆಲಗೂಡ್, ಚನ್ನಬಸಪ್ಪ ಉಡುಗಿ, ವಿಶ್ವನಾಥ್ ಗೌನಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರೇಣುಕಾ ಹಾಗರಗುಂಡಗಿ ಪ್ರಾರ್ಥಿಸಿದರು. ಶಿವಾನಂದ ಬಂದೆ ಅವರು ಕೇದಾರ್ ರಾಗದಲ್ಲಿ ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದರು.

ನಾಗರಾಜ್ ಗುಡ್ಡೂರ, ಶಿವಕುಮಾರ್ ಹಿರೇಮಠ, ಬಸಯ್ಯ ಗುತ್ತೇದಾರ, ಕಲ್ಪನಾ ಗೋಲ್ಡಿಸ್ಮಿತ್, ದತ್ತರಾಜ್ ಕಲ್ ಶೆಟ್ಟಿ ಸೇರಿದಂತೆ ಅನೇಕ ಕಲಾವಿದರು ವೈಭವದ ಸಂಗೀತ ಕಾರ್ಯಕ್ರಮ ನೀಡಿದರು. ಶಂಕರ್ ರುದ್ರವಡಿ ಅವರು ಸಿತಾರ್ ವಾದನದಿಂದ ಗಮನಸೆಳೆದರು.

ಪರಶುರಾಮ್ ಗರೂರ್ಚೇತನ್ ಕುಮಾರ್ ಬೀದಿಮನಿ, ರವಿ ಸ್ವಾಮಿ ಗೋಟೂರು, ಚಂದ್ರಕಾಂತ್ ನಿರುಗುಡಿ, ಗುರುರಾಜ್ ಬಿರಾದರ್ ವಾದ್ಯ ಸಂಗೀತದಲ್ಲಿ ಸಹಕರಿಸಿದರು. ಶಿವಶಂಕರ್ ಬಿರಾದರ್ ಮಂಗಲಗಾನ ಹಾಡಿ ಕಾರ್ಯಕ್ರಮಕ್ಕೆ ತೆರೆ ಎಳೆದರು. ಕಾರ್ಯಕ್ರಮವನ್ನು ಚಿದಾನಂದ ಎಸ್. ಚರಣಮಗೇರಿ ಕಾರ್ಯಕ್ರಮ ನಿರೂಪಿಸಿದರು. ರಾಜಕುಮಾರ್ ಉದನೂರು ವಂದಿಸಿದರು. ಸಂಸ್ಥೆಯ ಕಾರ್ಯದರ್ಶಿ ಬಸವರಾಜ್ ತೆಂಗಳಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆದಿರುವುದಾಗಿ ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿವಿಧ ಕಲಾ ಪ್ರದರ್ಶನಗಳು ಹಾಗೂ ಸಂಗೀತ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೂರೆಗೊಂಡವು.

ಸವಿತಾ ಹಡಪದ ಸಮಾಜದ ಸಮುದಾಯ ಭವನಕ್ಕೆ ಶಂಕುಸ್ಥಾಪನೆ



ಹುಲಸೂರ್,ಏ.21-

ಪಟ್ಟಣದ ಹೊರವಲಯದ ಇಸಂಪಲ್ಲಿ ಭವಾನಿ ಮಂದಿರ ಎದುರುಗಡೆ ಶನಿವಾರ ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ್ ಅವರ 2024-25ನೇ ಸಾಲಿನ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ ಅನುದಾನದ ಅಡಿಯಲ್ಲಿ 4.50 ಲಕ್ಷ ರೂ. ನಲ್ಲಿ ಸವಿತಾ ಹಡಪದ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಗ್ಯಾರಂಟಿ ಯೋಜನೆಗಳ ಜಿಲ್ಲಾ ಉಪಾಧ್ಯಕ್ಷೆ ಲತಾ ಹಾರಕುಡೆ ಅವರು ಶಂಕುಸ್ಥಾಪನೆ ಮಾಡಿದರು.

ಶಂಕುಸ್ಥಾಪನೆ ನಡೆಸಿ ಮಾತನಾಡಿದ ಲತಾ ಹಾರಕುಡೆ ಅವರು, ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡುವ ಉದ್ದೇಶದಿಂದ ಸವಿತಾ ಹಡಪದ ಸಮಾಜದ ಸಮುದಾಯದವರಿಗೆ ಅನುಕೂಲವಾಗುವ ರೀತಿಯಲ್ಲಿ ಭವನ ನಿರ್ಮಾಣ ಮಾಡಲಾಗುತ್ತಿದೆ. ಈ ಭವನವು ಸಮುದಾಯ ಜನರು ಉಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸುಧೀರ್ ಕಾಡಾದಿ, ಗ್ರಾಪಂ ಮಾಜಿ ಅಧ್ಯಕ್ಷ ರಣಜಿತ್ ಗಾಯಕವಾಡ್, ಸಂಜು ಭೂಸಾರೆ, ಪಿಕೆಪಿಎಸ್ ಅಧ್ಯಕ್ಷ ಭಾಗವತ್ ಜಾನಬಾ, ಸಂತೋಷ್ ಗಾಯಕವಾಡ್, ಗುಲಾಮ್ ಬಡಾಯಿ, ಇಜಾಜ್ ಜಹಾಂಗೀರ, ಸವಿತಾ ಹಡಪದ ಸಮಾಜದ ತಾಲೂಕಾಧ್ಯಕ್ಷ ಪ್ರವೀಣ್ ಸೂರ್ಯವಂಶಿ, ಕಲ್ಯಾಣಿ ದಾನ, ದತ್ತಾ ಮೊರೆ ಹಾಗೂ ರಾಜಕುಮಾರ್ ತೊಂಡಾರೆ ಸೇರಿದಂತೆ ಸವಿತಾ ಹಡಪದ ಸಮಾಜದ ಗಣ್ಯರು ಉಪಸ್ಥಿತರಿದ್ದರು.

ಬಸವಣ್ಣ ಸಮಾನತೆಯ ಸಂದೇಶ ಜಗತ್ತಿಗೆ ನೀಡಿದ ವಿಶ್ವಗುರು: ಶಾಸಕ ಶೈಲೇಂದ್ರ ಬೆಲ್ದಾಳೆ



ಬೀದರ್,ಏ.20-

ಇತ್ತೀಚಿನ ದಿನಗಳಲ್ಲಿ ಸಣ್ಣಪುಟ್ಟ ವಿಚಾರಗಳಿಗೆ ಸಹೋದರರೇ ದಾಯಾದಿಗಳಾಗುತ್ತಿರುವ ಸಂದರ್ಭದಲ್ಲೂ, 9 ಶತಮಾನಗಳ ಹಿಂದೆಯೇ ಪ್ರತಿಯೊಬ್ಬರನ್ನು ''ಇವ ನಮ್ಮವ'' ಎಂದು ಒಗ್ಗೂಡಿಸುವ ಸಂದೇಶ ನೀಡಿದ ವಿಶ್ವಗುರು ಬಸವಣ್ಣ ಎಂದೇ ಗುರುತಿಸಿಕೊಂಡವರು ಎಂದು ಶಾಸಕ ಶೈಲೇಂದ್ರ ಬೆಲ್ದಾಳೆ ಹೇಳಿದರು.

ನಗರದ ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಅಲ್ಲಮಪ್ರಭು ಅವರ ಅಧ್ಯಕ್ಷತೆಯಲ್ಲಿ 700ಕ್ಕೂ ಹೆಚ್ಚು ಶರಣರು ಸಮಾಜದ ವಿಚಾರಗಳನ್ನು ಚರ್ಚಿಸಿ, ವಚನಗಳ ಮೂಲಕ ಶ್ರೇಷ್ಠವಾದ ಸಂದೇಶಗಳನ್ನು ನೀಡಿದ್ದಾರೆ ಎಂದರು.

ನಾವು ''ನಾನು'' ಎಂಬ ಅಹಂ ಬಿಟ್ಟು ''ನಾವು'' ಎಂಬ ಭಾವನೆ ಬೆಳೆಸಿಕೊಂಡು, ಎಲ್ಲಾ ಜಾತಿ ಪಂಗಡದವರು ಒಗ್ಗೂಡಿ ಸಾಮರಸ್ಯದ ಬದುಕು ಸಾಗಿಸಬೇಕು ಎಂದು ಕರೆ ನೀಡಿದರು.

ಶಿವಶರಣಪ್ಪ ವಾಲಿ ಮಾತನಾಡಿ, ಬಸವಣ್ಣನವರು ಯಾವುದೇ ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಲಿಂಗದೀಕ್ಷೆ ನೀಡುವ ಮೂಲಕ ಸಮಾನತೆಯ ಸಂದೇಶ ಸಾರಿದರು. ಆದರೆ ಇಂದಿನ ದಿನಗಳಲ್ಲಿ ಸಮಾಜವನ್ನು ಒಗ್ಗೂಡಿಸಬೇಕಾದವರೇ ವಿಭಜನೆಗೆ ಕಾರಣವಾಗುತ್ತಿರುವುದು ದುಃಖಕರ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರು.

ಪ್ರೊ.ವೆಂಕಣ್ಣ ದೊಣ್ಣೇಗೌಡ ಉಪನ್ಯಾಸ ನೀಡಿ, ಬಸವಣ್ಣ ಹಾಗೂ ಶರಣರು ಕಂದಾಚಾರ, ಆಡಂಬರ ಮತ್ತು ಮೂಢನಂಬಿಕೆಗಳನ್ನು ತಿರಸ್ಕರಿಸಿ ವೈಜ್ಞಾನಿಕತೆಯನ್ನೇ ಭಕ್ತಿ ಎಂದು ಪ್ರತಿಪಾದಿಸಿದರು. ಕಾಯಕ ಮತ್ತು ದಾಸೋಹವೇ ನಿಜವಾದ ಭಕ್ತಿ ಎಂಬ ತತ್ವವನ್ನು ಜಗತ್ತಿಗೆ ನೀಡಿದ್ದಾರೆ ಎಂದು ಹೇಳಿದರು.

ಜಾತಿ ವ್ಯವಸ್ಥೆ ಬಲವಾಗಿದ್ದ ಕಾಲದಲ್ಲೇ ಶರಣರು ಅದನ್ನು ತೊಡೆದು ಹಾಕಿ ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿದ್ದು, ಭಕ್ತನು ದೇವನಾಗಬಲ್ಲನು ಎಂಬ ಸಂದೇಶವನ್ನು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗಂಗಾಬಿಕಾ ಅಕ್ಕ, ರಜನೀಶ್ ವಾಲಿ, ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಶಿಧರ್ ಹೊಸಳ್ಳಿ, ಸಮಿತಿ ಖಜಾಂಚಿ ಸಿದ್ದು ಸ್ವಾಮಿ, ಭಾರತೀಯ ಬಸವ ಬಳಗದ ಅಧ್ಯಕ್ಷ ಬಾಬು ವಾಲಿ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಬಸವರಾಜ್ ಧನ್ನೂರ್ ಧನರಾಜ್ ಹಂಗರಗಿ, ಸುರೇಶ್ ಚೆನ್ನಶೆಟ್ಟಿ, ಶಕುಂತಲಾ ಬೆಲ್ದಾಳೆ ಹಾಗೂ ಅನ್ನುಲ್ ವಾಲಿ ಸೇರಿ ಉಪಸ್ಥಿತರಿದ್ದರು.

ಧರ್ಮದಿಂದ ರಾಷ್ಟ್ರೀಯತೆ ಅಳೆಯುವುದು ಸಮಾಜಕ್ಕೆ ಮಾರಕ

ಕಲಬುರಗಿ,ಏ.20-

ಇತ್ತೀಚೆಗೆ ದೇಶದಲ್ಲಿ ಧರ್ಮದಿಂದ ರಾಷ್ಟ್ರೀಯತೆ ಅಳೆಯಲಾಗುತ್ತಿದ್ದು, ಇದು ತುಂಬಾ ಆತಂಕ ಉಂಟು ಮಾಡುತ್ತಿದೆ. ಇದು ಬಸವಣ್ಣನವರ ಕನಸಾಗಿದ್ದ ಜಾತಿರಹಿತ ಸಮಸಮಾಜ ನಿರ್ಮಾಣಕ್ಕೆ ಮಾರಕ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮರೆಪ್ಪ ಹಳ್ಳಿ ಹೇಳಿದರು.

ಶುಕ್ರವಾರ ಶಹಾಬಾದ ಪಟ್ಟಣದ ಹಳೆಯ ಶಹಾಬಾದಿನಲ್ಲಿ ಬಸವಾದಿ ಶರಣರ ಒಕ್ಕೂಟ ಸಮಿತಿ, ಜಾಗತಿಕ ಲಿಂಗಾಯತ ಮಹಾಸಭೆ ತಾಲೂಕು ಘಟಕ ಹಾಗೂ ಶ್ರೀ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟ್, ಹಳೆಯ ಶಹಾಬಾದ ಇವರ ಸಂಯುಕ್ತಾಶ್ರಯದಲ್ಲಿ 893ನೇ ಬಸವ ಜಯಂತಿ ಉತ್ಸವದ ನಿಮಿತ್ತ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಷಟಸ್ಥಲ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಬಸವಣ್ಣನವರು ಇವನ್ಯಾರ ಇವನ್ಯಾರವ ಎನ್ನದೆ ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನು ಅಪ್ಪಿ-ಒಪ್ಪಿಕೊಂಡು ಎಲ್ಲ ವರ್ಗದ



ಜನರನ್ನು ಜೊತೆಯಲ್ಲಿ ತೆಗೆದುಕೊಂಡು ಹೋದ ಮಹಾನ್ ಮಾನವತಾವಾದಿಯಾಗಿದ್ದಾರೆ. ಆದರೆ ಇಂದು ದೇಶದಲ್ಲಿ ಧರ್ಮದಿಂದ ರಾಷ್ಟ್ರೀಯತೆ ಅಳೆಯುತ್ತಿರುವುದು ದುರಾದೃಷ್ಟಕರ. ಇದು ಬಸವ ತತ್ವಕ್ಕೆ ವಿರುದ್ಧವಾದ ನಡೆ ಎಂದು ಅವರು ಅಭಿಪ್ರಾಯಪಟ್ಟರು. ಇದಕ್ಕೂ ಮುನ್ನ ಬಿಜೆಪಿ ನಾಯಕಿ ಜಯಶ್ರೀ ಬಸವರಾಜ ಮತ್ತಿಮೂಡ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹನ್ನೆರಡನೇ ಶತಮಾನದಲ್ಲೇ ಬಸವಣ್ಣನವರು ಸರ್ವರಿಗೆ ಸಮಾನತೆ ನೀಡಿ ಜಾತಿರಹಿತ ಸಮಾಜಕ್ಕೆ ಸಾಮಾಜಿಕ ಕ್ರಾಂತಿ ಮಾಡಿದ ಮಹಾನ್ ಕ್ರಾಂತಿಕಾರಕ ಪುರುಷರಾಗಿದ್ದಾರೆ. ನಮಗೆ ಇಂದು ಮಹಿಳಾ ಮೀಸಲಾತಿ ಚರ್ಚಿತ ವಿಷಯವಾಗಿದೆ. ಆದರೆ ಅಂದೇ ಬಸವಣ್ಣನವರು ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಸಮಾನತೆ ಕಲ್ಪಿಸಿದ್ದರು. ಇದನ್ನು ಮಹಿಳೆಯರು ಮರೆಯಬಾರದು ಎಂದರು.

ಕಲಬುರಗಿಯ ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ ಸಂಜಯ್ ಮಾಕಲ್ ವಿಶೇಷ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಚಿನ್ಮಯಿ ಕಲಾ ತಂಡದ ಪುಟಾಣಿ ಮಕ್ಕಳಿಂದ ವಚನ ನೃತ್ಯ ನಡೆಯಿತು. ಶರಣಗೌಡ ನಾ. ಪಾಟೀಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಹಳೆಯ ಶಹಾಬಾದಿನಲ್ಲಿ ಕಳೆದ 24 ವರ್ಷಗಳಿಂದ ಬಸವ ಜಯಂತಿಯನ್ನು ತುಂಬಾ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ರಾವೂರು ಶ್ರೀ ಸಿದ್ದಲಿಂಗೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಮ.ನಿ.ಪ್ರ. ಸಿದ್ದಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಬಸವ ಜಯಂತಿ ಉತ್ಸವ ಸಮಿತಿಯ ಗೌರವಾಧ್ಯಕ್ಷ ಬಸವರಾಜ ಪಾಟೀಲ, ಡಿ.ವೈ.ಎಸ್.ಪಿ. ಶಂಕರಗೌಡ ಪಾಟೀಲ, ಶಹಾಬಾದ ಕ.ಸಾ.ಪ. ತಾಲೂಕು ಘಟಕದ ಅಧ್ಯಕ್ಷ ಶರಣಬಸಪ್ಪ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಕಲಬುರಗಿಯಲ್ಲಿ ಬಸವ ಜಯಂತಿ ಅಂಗವಾಗಿ ಕಾರ್ ರ್‍ಯಾಲಿ

ಕಲಬುರಗಿ,ಏ.20-

ಬಸವ ಜಯಂತಿ ನಿಮಿತ್ತ ಬಸವ ಮಿತ್ರ ಮಂಡಲ ಹಮ್ಮಿಕೊಂಡಿದ್ದ 12ನೇ ವರ್ಷದ ಬೃಹತ್ ಕಾರ್ ರ್‍ಯಾಲಿ ನಗರದಲ್ಲಿ ವೈಭವದಿಂದ ಜರುಗಿತು.

ಮಂಡಲದ ಜಗದೀಶ್ ದೇಶಮುಖ ಅವರ ನೇತೃತ್ವದಲ್ಲಿ ನಡೆದ ರ್‍ಯಾಲಿಗೆ ಶ್ರೀ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿಗಳಾದ ಪೂಜ್ಯ ಡಾ. ದೊಡ್ಡಪ್ಪ ಅಪ್ಪ ಚಾಲನೆ ನೀಡಿ ಆಶೀರ್ವದಿಸಿದರು.

ಶ್ರೀ ಶರಣಬಸವೇಶ್ವರ ದೇವಸ್ಥಾನದ ಆವರಣದಿಂದ ಆರಂಭವಾದ ಈ ಮೆರವಣಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಅನ್ನಪೂರ್ಣ ಕ್ರಾಸ್ ಮೂಲಕ ಸಾಗುತ್ತಾ ಜಗತ್ ವೃತ್ತ ತಲುಪಿತು. ಬಳಿಕ ಬಸವಣ್ಣ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ರ್‍ಯಾಲಿ ಸಮಾಪ್ತಿಯಾಯಿತು.

ಸುಮಾರು 1000ಕ್ಕೂ ಹೆಚ್ಚು ಕಾರುಗಳಲ್ಲಿ ಸಾವಿರಾರು ಬಸವ ಭಕ್ತರು ಭಾಗವಹಿಸಿ



ನಗರಾದ್ಯಂತ ಬಸವಣ್ಣನವರ ಜಯಘೋಷ ಮೊಳಗಿಸಿದರು. ರ್‍ಯಾಲಿಯುದ್ದಕ್ಕೂ ಯುವ ಸಮೂಹದ ಉತ್ಸಾಹ ಗಮನಸೆಳೆಯಿತು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಶಾಸಕರಾದ ಎಂ.ವೈ. ಪಾಟೀಲ್, ಡಾ. ಅಜಯ್ ಸಿಂಗ್, ದತ್ತಾತ್ರೇಯ ಪಾಟೀಲ್ ರೇವೂರ್ ಶಶೀಲ್ ನಮೋಶಿ, ಮಾಜಿ ಸಂಸದ ಡಾ. ಉಮೇಶ್ ಜಾಧವ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಇಷ್ಟಲಿಂಗ ಪೂಜೆ, ದೀಕ್ಷಾ ಸಮಾರಂಭ : ಬಸವ ಜಯಂತಿ ಅಂಗವಾಗಿ ಶ್ರೀ ಶರಣಬಸವೇಶ್ವರ ದೇವಸ್ಥಾನದಲ್ಲಿ ಜಿಲ್ಲಾ ಬಸವ ಜಯಂತಿ ಉತ್ಸವ ಸಮಿತಿ ವತಿಯಿಂದ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ದೀಕ್ಷಾ ಸಮಾರಂಭ ಭಕ್ತಿಭಾವದಿಂದ ನಡೆಯಿತು.

ಇಳಕಲದ ಮಹಾಂತೇಶ್ವರ ಮಠದ ಗುರು ಮಹಾಂತ ಮಹಾಶಿವಯೋಗಿಗಳು ಹಾಗೂ ಪ್ರಭುಶ್ರೀ ಮಾತಾಜಿ ಅವರ ಮಾರ್ಗದರ್ಶನದಲ್ಲಿ ಪೂಜೆ ಕೈಂಕರ್ಯಗಳು ನಡೆದವು. ಈ ಸಂದರ್ಭದಲ್ಲಿ ಬಸವಣ್ಣ ಅವರ ಕಾಯಕ-ದಾಸೋಹ ತತ್ವಗಳು, ಸಾಮಾಜಿಕ ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಸುಮಾರು 1000ಕ್ಕೂ ಅಧಿಕ ಭಕ್ತರು ಏಕಕಾಲದಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿ ಶರಣ ಸಂಸ್ಕೃತಿಯ ಮಹತ್ವವನ್ನು ಮೆರೆದರು.

ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಉತ್ಸವ ಸಮಿತಿ ಅಧ್ಯಕ್ಷ ಬಿ.ಆರ್. ಪಾಟೀಲ್, ಕಾರ್ಯಾಧ್ಯಕ್ಷ ಬಿ.ಜಿ. ಪಾಟೀಲ್ ಹಾಗೂ ಶಾಸಕ ಅಲ್ಲಮಪ್ರಭು ಪಾಟೀಲ್ ಪಾಲ್ಗೊಂಡಿದ್ದರು. ಅಲ್ಲದೆ, ಬಸವರಾಜ್ ದೇಶಮುಖ, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ರವೀಂದ್ರ ಶಾಬಾದಿ, ಆರ್.ಜಿ. ಶೆಟ್ಟಗರ್‌ಡಾ. ಭಾಗ್ಯಶ್ರೀ ಪಾಟೀಲ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ರಾಜ್ಯಾದ್ಯಂತ ಸಂಭ್ರಮದ ಬಸವ ಜಯಂತಿ ಆಚರಣೆ

ಕಾರ್ಯಕ್ರಮದಲ್ಲಿ ಹಾಜರಿದ್ದ ಮಾಜಿ ಸಂಸದ ಶಿವರಾಮಗೌಡ ಮಾತನಾಡಿ, ಪಂಚಾಯಿತಿಯಿಂದ ಹಿಡಿದು ಪಾರ್ಲಿಮೆಂಟಿನವರೆಗೂ ಮಹಿಳೆಯರಿಗೆ ವಿಶೇಷ ಸ್ಥಾನಮಾನ ನೀಡುವ ಸಂಕಲ್ಪ ನರೇಂದ್ರ ಮೋದಿ ಹೊಂದಿದ್ದರು. ಆದರೆ, ಈ ಮಸೂದೆಯನ್ನು ವಿಫಲಗೊಳಿಸುವ ಮೂಲಕ ಕಾಂಗ್ರೆಸ್ಸಿ ನ ದುರುದ್ದೇಶಕ್ಕೆ ಜಯವಾಗಿದೆ. ಮಹಿಳಾ ಸಮಾನತೆಗೆ ಕಾಂಗ್ರೆಸ್ ನೇತೃತ್ವದಲ್ಲಿನ ಎಲ್ಲಾ ವಿರೋಧ ಪಕ್ಷಗಳು ಕೊಡಲಿ ಪೆಟ್ಟು ನೀಡಿವೆ. ಮುಂದಿನ ದಿನಗಳಲ್ಲಿ ಈ ಮಹಿಳಾ ಬಿಲ್ ಮತ್ತೆ ಮಂಡನೆಯಾಗಬೇಕು, ಮಹಿಳೆಯರಿಗೆ ಸಮಾನ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ವಿಶ್ವಗುರು ಬಸವಣ್ಣ ಜಗತ್ತಿನ ಅದ್ಭುತ - ಹಾಜಿಚೌದ್ರಿ

ಅವರ ಸಂದೇಶಗಳು ಇಂದಿಗೂ ಪ್ರಸ್ತುತ. ಯುದ್ಧ ಹಾಗೂ ಜಾತಿಗಳ ಸಂಘರ್ಷದಲ್ಲಿ ಬದುಕುತ್ತಿರುವ ನಾವು ಬಸವಣ್ಣನವರ ವಿಚಾರ ಅಳವಡಿಸಿಕೊಳ್ಳುವುದು ಅಗತ್ಯ' ಎಂದು ಅಭಿಪ್ರಾಯಪಟ್ಟರು. , ಈ ಸಂದರ್ಭದಲ್ಲಿ ಸದಸ್ಯರಾದ ಹಸೇನ ಅಲಿಸಾನ್, ಮಾರ್ಕಪ್ಪ,ಮೌಲಾಸಾಬ ವರ್ಚಸ್ ಅಜೀತ್ ಹೊನ್ನಟಗಿ, ಚನ್ನಪ್ಪ ದೇವರಮನೆ, ಮುಖಂಡರಾದ ಜಿ.ವಿರೇಶ, ಬಸವರಾಜ ಸಾಹುಕಾರ, ಮಲ್ಲಪ್ಪ, ಗ್ಯಾನಪ್ಪ,ರಂಗನಾಥ ಭೋವಿ, ನಾಗರಾಜ, ಪ.ಪಂ.ಮಾಜಿ ಉಪಾದ್ಯಕ್ಷ ಚನ್ನಬಸವ ಗಡ್ಲ, ಕ.ಕಾ.ಪ.ಸಂಘ ಅದ್ಯಕ್ಷ ಹನುಮೇಶ, ಚಂದ್ರಶೇಖರ ಹಡಪದ್, ರಾಜ ಭೋವಿ, ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯಪಾಟೀಲ್, ಸುನೀತಾ ಸಜ್ಜನ್, ಸೇರಿದಂತೆ ಇನ್ನಿತರರು ಇದರು.

ಕುಡಿಯುವ ನೀರು ಸಮಸ್ಯೆ ಉಲ್ಬಣಿಸದಂತೆ ಕಟ್ಟುನಿಟ್ಟಿನ ಕ್ರಮ

17 ಕೋಟಿ ಅನುದಾನದಲ್ಲಿ ಮುಷ್ಟೂರು, ಜೀನೂರು, ಬಲ್ಲಟಗಿ ಸೇತುವೆ ನಿರ್ಮಾಣ ಬೋಸರಾಜು

ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದು ಮಾನ್ವಿ ಪಟ್ಟಣ ಸೇರಿದಂತೆ ಕ್ಷೇತ್ರದಾದ್ಯಂತ ಎಲ್ಲಾ ಕೆರೆಗಳಿಗೆ ಎಡದಂಡೆ ನಾಲೆಯ ಮೂಲಕ ನೀರು ತುಂಬಿಸುವ ಕಾರ್ಯ ಯಶಸ್ವಿಯಾಗಿದ್ದು ಮಾನ್ವಿ ಕೆರೆಯಲ್ಲಿ 7.5 ಮೀ.ನೀರು ಭರ್ತಿ ಮಾಡಲಾಗಿದೆ. ಕೆಲ ವಾರ್ಡುಗಳಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಬೋರವೆಲ್ ಅಳವಡಿಕೆ ಹಾಗೂ ಪ್ಲಸಿಂಗ್ ಕಾರ್ಯಕ್ಕೆ ಮುಂದಾಗಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಎನ್.ಎಸ್.ಬೋಸರಾಜು ತಿಳಿಸಿದರು.

ಪಟ್ಟಣದಲ್ಲಿ ಜೆಜೆಎಂ, ಅಮೃತಧಾರೆ ಯೋಜನೆಯ ಕಾಮಗಾರಿಗಳು ಹಾಗೂ ಮುಖ್ಯ ಪೈಪ್ ಲೈನ್ ಅಳವಡಿಕೆ ಕಾಮಗಾರಿಗಳು ನಡೆದಿದ್ದು ಈ ಕಾಮಗಾರಿಗಳು ಪೂರ್ಣಗೊಂಡ ನಂತರ ಕುಡಿಯುವ ನೀರಿನ ಸಮಸ್ಯೆ ಬಹುತೇಕ ನೀಗಲಿದೆ ಎಂದರು. ಈ ಸಂಧರ್ಬದಲ್ಲಿ ಶಾಸಕ ಜಿ.ಹಂಪಯ್ಯನಾಯಕ ಸಾಹುಕಾರ, ನಯೋಪ್ರಾ ಅಧ್ಯಕ್ಷ ಅಬ್ದುಲ್ ಗಫೂರಸಾಬ್, ಗ್ಯಾರೆಂಟಿ ಸಮಿತಿ ಅಧ್ಯಕ್ಷ ಬಿ.ಜೆ.ಅಮರೇಶಪ್ಪ, ಮುಖಂಡರಾದ ಸೈಯದ್ ಖಾಲಿದ್ ಖಾದ್ರಿ, ಮಹಾಂತೇಶಸ್ವಾಮಿ ರೌಡೂರು, ಎಂ.ಡಿ.ಫಯಾಜ್, ರಾಜಾಸುಭಾಷ್ಚಂದ್ರನಾಯಕ, ಸತ್ತಾರ್ ಬಂಗ್ಲೆವಾಲೆ ಸೇರಿದಂತೆ ಇನ್ನಿತರರಿದ್ದರು.



ಸಚಿವರಿಂದ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ

ಬಸವಣ್ಣ ಮಾರ್ಗದಲ್ಲಿ ಸಾಗೋಣ-ಬೋಸರಾಜು

ಸಿರವಾರ.ಏ.20- ಜಗ್ಗತಿಗೆ ಸಮ ಸಮಾಜದ ಪರಿಕಲ್ಪನೆ ಸಾರಿದ ಬಸವಣ್ಣನವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದರೆ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವರು ಪರಿಷತ್ತಿನ ಸಭಾ ನಾಯಕರಾದ ಎನ್ ಎಸ್ ಬೋಸರಾಜು ಹೇಳಿದರು.

ಪಟ್ಟಣದಲ್ಲಿ ಜಗತ್ ಜ್ಯೋತಿ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಚುಕ್ಕಿ ಸೂಗಪ್ಪ ಸಾಹುಕಾರ ರಾಯಚೂರು ನಗರಸಭೆಯ ಹಿರಿಯ ಸದಸ್ಯರಾದ ಜಯಣ್ಣ, ಮಾಜಿ ಸದಸ್ಯರಾದ ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ, ಬಸವರಾಜ್ ಪಾಟೀಲ್ ಅತಾನೂ,ಶಿವಮೂರ್ತಿ, ಪ.ಪಂ ಅದ್ಯಕ್ಷ ಹಾಜಿ ಚೌದರಿ, ಹಸನ್ ಅಲಿ, ಮಾಜಿ ಅದ್ಯಕ್ಷ ವೈ.ಭೂಪನಗೌಡ,

ಅಮರೇಶಪ್ಪ ಸಾಹುಕಾ, ಕಲ್ಲೂರು ಬಸವರಾಜ ನಾಯಕ, ಹೆಚ್ ಕೆ ಅಮರೇಶ,ಸೂರಿ ದುರುಗಣ್ಣನಾಯಕ, ಮಾರ್ಕಪ್ಪ, ಚನ್ನಪ್ಪ ನಾಯಕ್ ಗಡ್ಲ,ಜಿ.ವಿರೇಶ, ಶ್ರೀಧರಸ್ವಾಮಿ, ರಂಗನಾಥ, ಚಂದ್ರಶೇಖರ, ರಾಜ ಇನ್ನಿತರ ಉಪಸ್ಥಿತರಿದ್ದರು.

ಸಿರುಗುಪ್ಪ : ಮುದ್ದಟನೂರು ಮಜೀದ್ ನಲ್ಲಿ ಖುರ್ರತ್ತು ಸ್ಸಾ ದಾತ್ ಸುನ್ನೀ ಮುಖ್ತಬಾ ಆರಂಭ ಮಕ್ಕಳಿಗೆ ನೈತಿಕ ಲೌಲಿಕ ಧಾರ್ಮಿಕ ಶಿಕ್ಷಣ ಅಗತ್ಯ ಖತೀಬ್ ಅಮೀರ್ ಬನ್ನೂರ್



ಸಿರುಗುಪ್ಪ - ಮಕ್ಕಳಿಗೆ ನೈತಿಕ ಲೌಲಿಕ ಉಜ್ವಲ ಭವಿಷ್ಯಕ್ಕೆ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣ ನೀಡುವ ಜವಾಬ್ದಾರಿ ಪೋಷಕರ ಮೇಲಿದೆ ಎಂದು ಖತೀಬ್ ಅಮೀರ್ ಬನ್ನೂರ್ ಅವರು ಹೇಳಿದರು ಸಿರುಗುಪ್ಪ ತಾಲೂಕು ಮುದ್ದಟ್ಟನೂರು ಗ್ರಾಮದ ಜಾಮಿಯಾ ಸುನ್ನಿ ಮಸ್ಜಿದ್ ನಲ್ಲಿ ಖುರ್ರತ್ತು ಸ್ಸಾ ದಾತ್ ಸುನ್ನೀ ಮುಖ್ತಬಾ ಆರಂಭ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿ ಗುರು ಹಿರಿಯರನ್ನು ತಂದೆ ತಾಯಿಯರನ್ನು ಗೌರವಿಸುವ ಉಜ್ವಲ ಭವಿಷ್ಯಕ್ಕೆ ಮನೋಭಾವ ಬೆಳೆಸಿ ಕೊಳ್ಳಬೇಕು ಮಕ್ಕಳಿಗೆ ನೈತಿಕ ಲೌಲಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣ ನೀಡುವ ಎಲ್ಲಾ ಧರ್ಮದ ಪ್ರತಿಯೊಬ್ಬರಿಗೆ ಧಾರ್ಮಿಕ ಶಿಕ್ಷಣ ಅಗತ್ಯವಾಗಿದೆ ಆಧ್ಯಾತ್ಮಿಕ ಶಿಕ್ಷಣ ಮನುಷ್ಯನಿಗೆ ಸೂಕ್ಷ್ಮ ಬದುಕನ್ನು ಕಲಿಸಿ ಕೊಡುತ್ತದೆ ಎಂದು ಅವರು ಮಾತನಾಡುತ್ತಿದ್ದರು ಖುರಾನ್ ಫಾತೇಹ ಸಲಾತೊ ಸಲಾಂ ನೊಂದಿಗೆ ದುವಾ ಆಶೀರ್ವಚನ ಮಾಡಿದರು ಗ್ರಾಮದ ಮುದ್ದಟನೂರು ಗ್ರಾಮದ ಮುತವಲ್ಲಿ ಹುಸೇನ್ ಸಾಬ್ ಅವರು ಸರ್ವರನ್ನು ಸ್ವಾಗತಿಸಿದರು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಸೇರಿ ಮಕ್ಕಳು ಪೋಷಕರು ಯುವಕರು ಪಾಲ್ಗೊಂಡಿದ್ದರು ಸರ್ವರಿಗೂ ಪ್ರಸಾದ ವಿತರಿಸಲಾಯಿತು.

ಬದುಕಿನ ಬೆಳಕಿಗೆ ವಚನಗಳು ದಾರಿದೀಪ

ರಾಯಚೂರು,ಏ.20- ಸ

ಬದುಕಿನ ಬೆಳಕಿಗೆ ವಚನಗಳು ದಾರಿ ತೋರುತ್ತವೆ. ಶರಣರು ಕ್ಷಣಿಕ ಸುಖಕ್ಕಿಂತ ಪರಮ ಸುಖದ ಕಡೆಗೆ ಸಾಗಿದ್ದರು. ಬಸವಣ್ಣವರು ತಮ್ಮ ವಚನಗಳಲ್ಲಿ ಇದನ್ನು ಸಾರಿ ಹೇಳಿದ್ದಾರೆ ಎಂದು ವಾಲ್ಮೀಕಿ ವಿಶ್ವವಿದ್ಯಾಲಯದ ಶಿಕ್ಷಣ ನಿಕಾಯದ ಡಿನರಾದ ಪ್ರೊ ಪಾರ್ವತಿ ಸಿ.ಎಸ್. ನುಡಿದರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿಂದು ಜಗಜ್ಯೋತಿ ಬಸವೇಶ್ವರ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಬಸವ ಜಯಂತಿ ಆಚರಿಸಿ ಮಾತನಾಡಿದ ಇವರು ಮೊದಲು ನಡೆದು ನಂತರ ನುಡಿಯುವುದು ಶರಣರ ಜೀವನಾದರ್ಶನವಾಗಿತ್ತು. ಬಸವಣ್ಣನವರಿದ್ದ ಅಲ್ಪಕಾಲಾವಧಿಯಲ್ಲಿ ಆರ್ಥಿಕ, ಸಾಮಾಜಿಕ, ಧಾರ್ಮಿಕವಾಗಿ ಜನಜೀವನದ ವಿವಿಧ ಸ್ತರಗಳಲ್ಲಿ ಹೊಸತನ ಮೂಡಿತು.ತಮ್ಮ ಬದುಕಿನ ಸರ್ವಸ್ವವನ್ನೆಲ್ಲ ವಚನಗಳ ಮೂಲಕ ಕನ್ನಡ ಕುಲಕೋಟಿಗೆ ಧಾರೆ ಎರೆದರು. ಸಹಸ್ರಾರು ಶರಣ ಶರಣೆಯರು ವಚನಗಳನ್ನು ರಚಿಸಿ ಎಲ್ಲ ಕಾಲಕ್ಕೂ ಜನಸಮೂಹದ ಬದುಕಿಗೆ ಮಾರ್ಗದರ್ಶಿ ದೀಪ್ತಿಗಳಾಗಿರುವಂತೆ ಮಾಡಿದ್ದಾರೆ. ಕಾಯಕವೇ ಕೈಲಾಸ ಎಂಬುದು ಬಸವಣ್ಣನವರು ಪ್ರತಿಪಾದಿಸಿದ ಪ್ರಮುಖ ವಚನ ತತ್ವವಾಗಿದ್ದು, ಕೆಲಸವೇ ದೇವರ ಪೂಜೆ ಅಥವಾ ಕೈಲಾಸಕ್ಕೆ ಸಮಾನ ಎಂದು ಸಾರುತ್ತದೆ. ಇದು ಶ್ರಮದ ಮಹತ್ವ, ಸಮಾನತೆ ಮತ್ತು ಪ್ರಾಮಾಣಿಕ ದುಡಿಮೆಯನ್ನು ಎತ್ತಿಹಿಡಿಯುತ್ತದೆ.

ಅವರ ವಿಚಾರಗಳು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಆಗ ಬಸವಜಯಂತಿಗೆ ಅರ್ಥ ಬರುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯ ನಿಕಾಯದ ಡಿನರಾದ ಪ್ರೊ ಪಿ ಭಾಸ್ಕರ್ , ಸಮಾಜ ಕಾರ್ಯ ವಿಭಾಗದ ಉಪನ್ಯಾಸಕ ಸುನೀಲ್ ಕುಮಾರ್ ಬೋಧಕೇತರ ಸಿಬ್ಬಂದಿ ಮೋಹನ್, ರವಿ,ಪ್ರದೀಪ್,ಕಿರಣ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ಮಲ್ಲಿಕಾರ್ಜುನ ವಚನ ಗೀತೆ ಹಾಡಿದರು, ಇಂಗ್ಲೀಷ್ ಉಪನ್ಯಾಸಕ ಅನಿಲ್ ಅಪ್ರಾಳ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಎ.23, 24 ರಂದು ಸಾಮಾನ್ಯ ಪ್ರವೇಶ ಪರೀಕ್ಷೆ : ನಿಷೇಧಾಜ್ಞೆ ಜಾರಿ

ಬೀದರ್,ಏ.20-

ಜಿಲ್ಲೆಯಲ್ಲಿ ಎ.23 ಮತ್ತು 24 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುತ್ತಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಶಾಂತ ವಾತಾವರಣದಲ್ಲಿ ನಡೆಸಲು ಅನುಕೂಲವಾಗುವಂತೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ-2023ರ ಕಲಂ 163 (1) ರನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲೆಯ ಒಟ್ಟು 34 ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್ ಟಿ ಡಿ ಮೊಬೈಲ್ ಪೇಜ್,ರ ಝಿರಾಕ್ಸ್, ಟೈಪಿಂಗ್, ಟ್ರೇನಿಂಗ್ ಸೆಂಟರ್ ಹಾಗೂ ಕಂಪ್ಯೂಟರ್ ಅಂಗಡಿಗಳು ನಿಷೇಧಿಸಲಾಗಿದೆ. ಪರೀಕ್ಷೆಯಲ್ಲಿ ಪ್ರವೇಶ ಪತ್ರ ಹೊಂದಿದ ವಿದ್ಯಾರ್ಥಿಗಳು, ನಿಯೋಜಿತ ಶಿಕ್ಷಕರು ಹಾಗೂ ಜಾಗೃತ ದಳದವರನ್ನು ಹೊರತುಪಡಿಸಿ



ಇನ್ನುಳಿದವರಿಗೆ ಪ್ರವೇಶವಿಲ್ಲ. ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದು, ನಕಲು ಮಾಡುವ ಸಾಮಗ್ರಿಗಳು ಹಾಗೂ ಹೊರಗಿನಿಂದ ನಕಲು ಬರೆದ ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದು ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಶ್ರವಣ ತೊಂದರೆ ಇರುವವರಿಗೆ ಉಚಿತ ಸಾಧನ ವಿತರಣೆ : ಸಚಿವ ಡಾ.ಶರಣಪ್ರಕಾಶ್

ಸೇಡಂ,ಏ.20-

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್? ಅವರ 59ನೇ ಜನ್ಮದಿನದ ಪ್ರಯುಕ್ತ ಅಭಿಮಾನಿ ಬಳಗದಿಂದ ಶ್ರವಣ ತೊಂದರೆಯಿರುವವರಿಗೆ ಉಚಿತ ಶ್ರವಣ ಸಾಧನ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಏಪ್ರಿಲ್ 20ರಂದು ಸೇಡಂ ಪಟ್ಟಣದ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ನುರಿತ ತಜ್ಞರಿಂದ ಶ್ರವಣ ತಪಾಸಣೆ ನಡೆಸಿ ಬಳಿಕ ಸಾಧನಗಳನ್ನು ವಿತರಿಸಲಾಗುವುದು ಎಂದು ಬಳಗದ ಪ್ರಮುಖರು ತಿಳಿಸಿದ್ದಾರೆ.



ಈಗಾಗಲೇ ನೋಂದಣಿ ಮಾಡಿಕೊಂಡಿರುವ 24 ಮಂದಿ ಮಧ್ಯಾಹ್ನ 1 ಗಂಟೆಗೆ ಸ್ಥಳಕ್ಕೆ ಹಾಜರಾಗುವಂತೆ ಮನವಿ ಮಾಡಲಾಗಿದೆ.

ಬಡವರು ಹಾಗೂ ಶಿೋಷಿತ್ರಿಗಾಗಿ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸುವ ಉದ್ದೇಶದಿಂದ ಈ ಸೇವಾ ಕಾರ್ಯ ಕೈಗೊಳ್ಳಲಾಗಿದೆ ಎಂದು ಅಭಿಮಾನಿ ಬಳಗ ತಿಳಿಸಿದೆ.

ಸಿಯುಕೆಯಲ್ಲಿ ಉತ್ತರ ಪೂರ್ವ ರಾಜ್ಯಗಳ ಉತ್ಸವ-2026 ವೈಭವ

ಆಳಂದ,ಏ.20-

ತಾಲೂಕಿನ ಕಡಗಂಚಿ ಸಮೀಪದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ)ದಲ್ಲಿ ಆಯೋಜಿಸಲಾದ ''ಉತ್ತರ ಪೂರ್ವ ರಾಜ್ಯಗಳ ಉತ್ಸವ2026'' ಕಾರ್ಯಕ್ರಮವು ವೈವಿಧ್ಯತೆಯೊಳಗಿನ ಏಕತೆಯನ್ನು ಸಾರುವ ವಿಶಿಷ್ಟ ವೇದಿಕೆಯಾಗಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕದ ಎಡಿಜಿಪಿ (ಆಡಳಿತ) ಯಾಡಾ ಮಾರ್ಟಿನ್ ಮಾರ್ಬನ್ಯಾಂಗ್, ಐಪಿಎಸ್ ಮಾತನಾಡಿ, ಉತ್ತರ ಪೂರ್ವ ರಾಜ್ಯಗಳ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಕೌಶಲ್ಯಗಳು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆ ಎಂದು ಹೇಳಿದರು. ಈ ಭಾಗದ ಜನರು ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿರುವುದು ಹೆಮ್ಮೆ ವಿಷಯ ಎಂದು ಅಭಿಪ್ರಾಯಪಟ್ಟರು.



ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಗುರುತನ್ನು ಉಳಿಸಿಕೊಂಡು, ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಶ್ರಮಿಸಬೇಕು ಎಂದು ಅವರು ಕರೆ ನೀಡಿದರು. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಮಾತನಾಡಿ, ಸಿಯುಕೆ ವೈವಿಧ್ಯತೆಯೊಳಗಿನ ಏಕತೆಯ ಪ್ರತಿರೂಪ ವಾಗಿದ್ದು, ಜಮ್ಮು ಮತ್ತು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಎಲ್ಲಾ ರಾಜ್ಯಗಳ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ''ಸಿಯುಕೆ ನಿಜಕ್ಕೂ ಮಿನಿ ಭಾರತ,'' ಎಂದು ಹೇಳಿದರು.

ಭಾರತದ ಬಹುಮುಖ ಸಮಾಜದ ಪ್ರತಿಬಿಂಬವಾಗಿರುವ ಈ ವಿಶ್ವವಿದ್ಯಾಲಯ ದಲ್ಲಿ ವಿವಿಧ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳು ಒಟ್ಟಾಗಿ ಕಲಿಯುತ್ತಾ ಬೆಳೆದು ಬರುತ್ತಿದ್ದಾರೆ ಎಂದು ಅವರು ಅಭಿಪ್ರಾಯ ಪಟ್ಟರು. ಉತ್ತರ ಪೂರ್ವ ವಿದ್ಯಾರ್ಥಿ ಸಮುದಾಯದ ಈ ರೀತಿಯ ಅರ್ಥಪೂರ್ಣ ಕಾರ್ಯಕ್ರಮ ಆಯೋಜನೆಯನ್ನು ಅವರು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಉತ್ತರ ಪೂರ್ವ ರಾಜ್ಯಗಳ ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ನೃತ್ಯ, ವೇಷಭೂಷಣ ಹಾಗೂ ಪರಂಪರೆಗಳನ್ನು ಮನಮೋಹಕವಾಗಿ ಪ್ರದರ್ಶಿಸಿ ಪ್ರೇಕ್ಷಕರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಪ್ರಭಾರ ಕುಲಸಚಿವರಾದ ಪ್ರೊ. ಚನ್ನವೀರ ಆರ್. ಎಂ., ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ. ಬಸವರಾಜ ಕುಬಕಡ್ಡಿ, ಕಾರ್ಯಕ್ರಮ ಸಂಯೋಜಕ ಡಾ. ಜೋಮಿಯರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕುಷ್ಟಗಿಯಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮಕ್ಕೆ ಚಾಲನೆ

ಲಕ್ಷ ಮನೆಗಳಲ್ಲಿ ಗ್ರಂಥಾಲಯದ ಬೀಜ ಬಿತ್ತುತ್ತೇವೆ: ಪುಸ್ತಕ ಪ್ರಾಧಿಕಾರದ ರಾಜ್ಯಾಧ್ಯಕ್ಷ ಡಾ.ಮಾನಸ

ಕೊಪ್ಪಳ ಏ.20-

ಪುಸ್ತಕ ನಮ್ಮೆಲ್ಲರ ಆಸ್ತಿಯಾಗಿದ್ದು, ಓದುವ ಅಭಿಯಾನವನ್ನು ವಿಸ್ತರಿಸುವ ನಿಟ್ಟನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವದ ಯೋಜನೆ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮಕ್ಕೆ ಏಪ್ರೀಲ್ 18ರಂದು ಕೊಪ್ಪಳ ಜಿಲ್ಲೆಯಲ್ಲಿ ಚಾಲನೆ ಸಿಕ್ಕಿತು.

ಕರ್ನಾಟಕ ಸರ್ಕಾರದ ರಾಜ್ಯ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಇವರ ಆಶ್ರಯದಲ್ಲಿ ಕುಷ್ಟಗಿ ನಗರದ ಹಿರಿಯ ಚಿಂತಕರು ಹಾಗೂ ಮಾಜಿ ಶಾಸಕರಾದ ಕೆ ಶರಣಪ್ಪ ವಕೀಲರ ಮನೆಯಲ್ಲಿನ ಪುಟ್ಟ ಗ್ರಂಥ ಭಂಡಾರದ ಸಮ್ಮುಖದಲ್ಲಿ, ಲಕ್ಷ ಗ್ರಂಥಾಲಯಗಳ ಯೋಜನೆ ಮನೆಗೊಂದು ಗ್ರಂಥಾಲಯದ ರೂಪು ರೇಷದ ಕರಪತ್ರವನ್ನು ವಿತರಿಸುವ ಮೂಲಕ ಪ್ರಾಧಿಕಾರದ ರಾಜ್ಯಾಧ್ಯಕ್ಷರಾದ ಡಾ.ಮಾನಸ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾನಸ ಅವರು ಮಾತನಾಡಿ, ಓದಬೇಕು, ಬರೆಯಬೇಕು ಎನ್ನುವ ಆಶಯದ ಅರ್ಥಪೂರ್ಣ ಮನಸುಗಳ ಮನೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ಸಿಗುತ್ತಿರುವುದು ಸಂತಷದ ಸಂಗತಿ ಎಂದರು.

ನೀನು ಜೀವನದಲ್ಲಿ ಎರಡು ರೂಪಾಯಿ ಗಳಿಸುತ್ತಿದ್ದರೆ ಅದರಲ್ಲಿ ಒಂದು ರೂಪಾಯಿ ಆಹಾರಕ್ಕೆ ಬಳಸು; ಮತ್ತೊಂದು ರೂಪಾಯಿ



ಯನ್ನು ಪುಸ್ತಕಕ್ಕೆ ಬಳಸು ಎಂಬುದು ಜ್ಞಾನದ ಶಿಖರ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೇಳಿಕೆಯಾಗಿದೆ. ಅವರ ಈ ಹೇಳಿಕೆಯೇ ಮನೆಯಲ್ಲಿ ಪುಟ್ಟದೊಂದು ಗ್ರಂಥಾಲಯ ಇರಬೇಕು ಎಂಬ ಯೋಜನೆ ರೂಪುಗೊಳ್ಳಲು ಪ್ರೇರಣೆಯಾಯಿತು ಎಂದು ಅವರು ತಿಳಿಸಿದರು.

ನಾವೆಲ್ಲರೂ ಈಗಾಗಲೇ ಆಹಾರಕ್ಕಾಗಿ ಒಂದು ರೂಪಾಯಿ ಬಳಸಿದ್ದೇವೆ. ಆದರೆ, ಪುಸ್ತಕಕ್ಕಾಗಿ ಮೀಸಲಿಡಬೇಕಾದ ಮತ್ತೊಂದು ರೂಪಾಯಿಯನ್ನು ಇನ್ನಾವುದಕ್ಕೋ ಬಳಸಿದ್ದು ಅದನ್ನು ಹುಡುಕಲೆಂದೇ ನಾವು ಲಕ್ಷ ಗ್ರಂಥಾಲಯಗಳ ಯೋಜನೆ ರೂಪಿಸಿ ಅನುಷ್ಠಾನ ಮಾಡುತ್ತಿದ್ದೇವೆ. ರಾಜ್ಯದಲ್ಲಿ ಲಕ್ಷ ಮನೆಗಳಲ್ಲಿ ಗ್ರಂಥಾಲಯದ ಬೀಜ ಬಿತ್ತುತ್ತೇವೆ ಎಂದು ತಿಳಿಸಿದರು.

ಜನರನ್ನು ಪೂಜಾಮನೆಗೆ ಕನೆಕ್ಟ್ ಮಾಡಿದ್ದಕ್ಕಾಗಿ ವಿಭೂತಿ, ಕರ್ಪೂರ, ಊದು ಬತ್ತಿ ಖರೀದಿಸುತ್ತ ಸಾಗಿದ್ದರಿಂದ ಊದುಬತ್ತಿ ಮಾರುವವರು, ಕರ್ಪೂರ ಮಾರುವವರು ಜೀವನ ಕಟ್ಟಿಕೊಂಡರು. ಲಕ್ಷಾಧೀಶರಾದರು. ಆದರೆ, ಜ್ಞಾನ ದಾಹ ಹೆಚ್ಚುವ ಪುಸ್ತಕಗಳನ್ನು ನಾವು ಪೂಜಾ ಸಾಮಗ್ರಿ ಜೊತೆಗೆ ಮಾರಾಟ ಮಾಡಲಿಲ್ಲ. ಈ ಕಾರಣದಿಂದಲೇ ಪುಸ್ತಕ ಪ್ರಕಟಿಸುವ ಮಾಲೀಕ ಈಗ ಬಡವನಾಗಿದ್ದೇನೆ ಎಂದರು. ಪೂಜೆಯನ್ನು ಮನೆಯೊಳಗೆ ಮತ್ತು ಮನೆ ಹೊರಗೆ ಮಾಡಿದೆವು. ಆದರೆ, ಮನೆಯಲ್ಲಿರಬೇಕಾದ ಜ್ಞಾನವನ್ನು ಹೊರ ಹಾಕಿದೆವು.

ಪುಸ್ತಕ ಅಂದರೆ ಬರೀ ಪುಸ್ತಕ ಅಲ್ಲ; ಅದು ಜ್ಞಾನದ ಆಗರ. ನಾವು ಜ್ಞಾನದ ವಾರಸುದಾರರು. ಹಾಗಾಗಿ ಹಿರಿಯರು ಮನೆಯಲ್ಲಿ ಪೂಜಾ ಮನೆ ಮಾಡಿದ್ದಾರೆ. ನಾವು ಪೂಜಾ ಮನೆ ಪಕ್ಕ ಒಂದು ಗ್ರಂಥಾಲಯ ಕಟ್ಟೋಣ, ಪುಸ್ತಕ ಜೋಡಿಸೋಣ. ನಿಲಯ ಆಲಯ ಆಗಬೇಕು ಎಂದರು.

ಹಿರಿಯರಾದ ಕೆ ಶರಣಪ್ಪ ವಕೀಲರು ಮಾತನಾಡಿ, ಕುಷ್ಟಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿಜಾಂ ಆಡಳಿತ ಇದ್ದಿತು. ಬೇರೆ ಭಾಷೆಯ ಪ್ರಭಾವ ಹೆಚ್ಚಿತ್ತು. ಇಂತಹ ಕಾರಣದಿಂದಲೇ ಈ ಭಾಗ ಹಿಂದುಳಿಯಿತು. ಇಂತಹ ಪ್ರದೇಶದಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆ ಅನುಷ್ಠಾನ ಕಾರ್ಯಕ್ರಮವನ್ನು ತಮ್ಮ ಮನೆಯಲ್ಲಿ ನೆರವೇರಿಸಿದ್ದಕ್ಕೆ ಸಂತೋಷವಾಯಿತು ಎಂದು ತಿಳಿಸಿದರು.

ಬುದ್ಧ ಬಸವ ಅಂಬೇಡ್ಕರ ಅವರ ತತ್ವಗಳನ್ನು ನಾವು ಅರಿಯಬೇಕು. ಅಂದಾಗ ಸಮಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ಅವರು ಸಲಹೆ ಮಾಡಿದರು.

ಸಮಾರಂಭದಲ್ಲಿ ರಾಜ್ಯೋತ್ಸವ ಪುರಸ್ಕತರಾದ ಶೇಖರಗೌಡ ಮಾಲಿಪಾಟೀಲ, ಪುಸ್ತಕ ಪ್ರಾಧಿಕಾರದ ಸದಸ್ಯರು ಹಾಗೂ ಸಂಶೋಧಕರಾದ ಡಾ.ಶರಣಬಸಪ್ಪ ಕೋಲಕಾರ, ರಾಜ್ಯ ಚಲನಚಿತ್ರ ಅಕಾಡೆಮಿಯ ಸದಸ್ಯರು ಮತ್ತು ಲೇಖಕಿ ಸಾವಿತ್ರಿ ಮುಜಮದಾರ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಗ್ರಂಥಾಲಯ ಜಾಗೃತಿ ಅಭಿಯಾನದ ಸಂಚಾಲಕರು ಹಾಗೂ ಸಾಹಿತಿಗಳಾದ ಜಿ ಎಸ್ ಗೋನಾಳ, ರವೀಂದ್ರ ಬಾಕಳೆ, ಕರಿಸಿದ್ದನಗೌಡ ಮಾಲಿಪಾಟೀಲ, ಸಾಹಿತಿಗಳಾದ ಹನುಮಂತಪ್ಪ ಈಟಿ, ಡಾ.ನಾಗರಾಜ ಹೀರಾ, ಕನ್ನಡಪರ ಹೋರಾಟಗಾರರಾದ ಸ.ಶರಣಪ್ಪ ಪಾಟೀಲ, ಪತ್ರಕರ್ತರಾದ ರವೀಂದ್ರ ಬಾಕಳೆ, ಹನುಮೇಶ ಗುಮಗೇರಿ, ಪವಾಡೆಪ್ಪ ಚೌಡ್ಕಿ, ಪರಶಿವಮೂರ್ತಿ, ಉಮೇಶ ಹಿರೇಮಠ ಹಾಗೂ ಇತರರು ಇದ್ದರು. ಜಾನಪದ ಅಕಾಡೆಮಿಯ ಸದಸ್ಯರು ಹಾಗೂ ಸಾಹಿತಿಗಳಾದ ಜೀವನಸಾಬ ವಾಲೀಕಾರ ಅವರು ನಿರೂಪಿಸಿದರು.

ವಿವಿಧೆಡೆ ಕಾರ್ಯಕ್ರಮ: ಕುಷ್ಟಗಿ ತಾಲೂಕಿನ ಅಮರೇಗೌಡ ಬಯ್ಯಾಪುರ, ಕೆ ಶರಣಪ್ಪ ವಕೀಲರು, ಡಾ.ನಾಗರಾಜ ಹೀರಾ, ಅಮರೇಗೌಡ ಜಾಲಿಹಾಳ, ಜೀವನಸಾಬ ವಾಲೀಕಾರ, ಹನುಮೇಶ ಗುಮಗೇರಿ ಅವರ ನಿವಾಸದಲ್ಲಿ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ನೆರವೇರಿತು.

ವಿಶೇಷ ಸನ್ಮಾನ: ಕುಷ್ಟಗಿ ತಾಲೂಕಿನ ಮದ್ನಾಳ ಗ್ರಾಮದಲ್ಲಿ ಉತ್ತಮ ಗ್ರಂಥಾಲಯ ಸೇವೆ ಮಾಡುತ್ತಿರುವ ಶರಣಪ್ಪ ತುಮರಿಕೊಪ್ಪ ಅವರಿಗೆ ಅಧ್ಯಕ್ಷರಾದ ಮಾನಸ ಅವರು ಇದೆ ವೇಳೆ ಸನ್ಮಾನಿಸಿದರು.

ಮಹಿಳಾ ಮೀಸಲಾತಿ ವಿಧೇಯಕ ವಿರೋಧಿಸಿದ ಕಾಂಗ್ರೆಸ್‌ಗೆ ನಾರಿ ಶಕ್ತಿಯ ಶಾಪ ತಟ್ಟಲಿದೆ: ಭಗವಂತ್ ಖೂಬಾ

ಬೀದರ್,ಏ.20-

ಮಹಿಳಾ ಮೀಸಲಾತಿ ವಿಧೇಯಕಕ್ಕೆ ಸಂಸತ್ತಿನಲ್ಲಿ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸಿದ್ದರಿಂದ ಅದು ಜಾರಿಯಾಗದೇ ಇರಲು ಕಾರಣವಾಗಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ್ ಖೂಬಾ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲೇ ಬಸವಣ್ಣ ಅವರ ಕಾಲದಲ್ಲಿ ಮಹಿಳೆಯರಿಗೆ ಮಹತ್ವದ ಸ್ಥಾನ ದೊರಕಿತ್ತು. ಅಕ್ಕಮಹಾದೇವಿ, ಅಕ್ಕ ನಾಗಮ್ಮ ಸೇರಿದಂತೆ ಹಲವು ಶಿವಶರಣೆಯರು ಅನುಭವ ಮಂಟಪದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇಂತಹ ಪರಂಪರೆ ಇರುವ ದೇಶದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ವಿಷಯದಲ್ಲಿ ವಿರೋಧ ವ್ಯಕ್ತಪಡಿಸಿರುವುದು ಮಹಿಳಾ ಲೋಕಕ್ಕೆ ಅವಮಾನವಾಗಿದೆ ಎಂದು ಕಿಡಿಕಾರಿದರು.

ಮಹಿಳಾ ಮೀಸಲಾತಿ ವಿಧೇಯಕ ಜಾರಿಯಾದರೆ ದಕ್ಷಿಣ ರಾಜ್ಯಗಳಿಗೆ ಯಾವುದೇ ಹಾನಿಯಿಲ್ಲ. ಬದಲಿಗೆ ಕ್ಷೇತ್ರ ಪುನರ್‌ವಿಂಗಡಣೆಯಿಂದ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹೆಚ್ಚಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಾಗೂ ಮಹಿಳೆಯರಿಗೆ ಹೆಚ್ಚಿನ ಪ್ರತಿನಿಧಿತ್ವ ಸಿಗುತ್ತಿತ್ತು ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಉಲ್ಲಾಸಿನಿ ಮುದಾಳೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಸದಾ ನಾರಿಶಕ್ತಿಯನ್ನು ಗೌರವಿಸುತ್ತಾರೆ. ಮಹಿಳಾ ಮೀಸಲಾತಿ ವಿಧೇಯಕ ಜಾರಿಗೆ ತರಲು ಬಿಜೆಪಿ ಪ್ರಯತ್ನಿಸಿದರೂ, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ವಿರೋಧಿಸುವ ಮೂಲಕ ಮಹಿಳೆಯರಿಗೆ ಅನ್ಯಾಯ ಮಾಡಿವೆ ಎಂದು ದೂರಿದರು.

ಮುಂಬರುವ ದಿನಗಳಲ್ಲಿ ಮಹಿಳಾ ಸಮೂಹ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಲಿದೆ ಎಂದು ಅವರು ಎಚ್ಚರಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡ ಗುರುನಾಥ್ ಜ್ಯಾಂತಿಕರ್, ಮಹಾನಗರ ಪಾಲಿಕೆ ಸದಸ್ಯ ಶಶಿಧರ್ ಹೊಸಳ್ಳಿ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶಕುಂತಲಾ ಬೆಲ್ದಾಳೆ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮೀ ಕೌಟಗೆ, ಕಾರ್ಯದರ್ಶಿ ಲುಂಬಿನಿ ಗೌತಮ್, ಶ್ರೀನಿವಾಸ್ ಚೌಧರಿ ಹಾಗೂ ಎಸ್ಸಿ ಘಟಕದ ಪ್ರಧಾನ ಕಾರ್ಯದರ್ಶಿ ಅರುಣ್ ಬಾವಗೆ ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ದೇಶಕ್ಕೆ ದೇಶವೇ ಎದ್ದು ನಿಂತು ಮೋದಿಯವರಿಗೆ ಚಪ್ಪಾಳೆ ತಟ್ಟುವಂತಾಗಲಿ!

ಜಗತ್ತಿನಲ್ಲಿ ಬದಲಾವಣೆಯೊಂದೇ ಶಾಶ್ವತ ಎಂಬ ಮಾತಿದೆ. ಉಳಿದಂತೆ ಯಾವುದೂ ಶಾಶ್ವತ ಅಲ್ಲ, ಯಾರೂ ಚಿರಂಜೀವಿ ಅಲ್ಲ. ಅಬ್ಬುಲ್ಲನ ರಿಪೇರಿ ಎಂಬ ಈ ಭ್ರಾಂತಿಯ ಪರದೆಯೂ ಒಂದು ದಿನ ಹರಿಯಲೇಬೇಕು. ತಿರುವಿ ಮೆರೆಯುತ್ತಿರುವ ಮೀಸೆಗಳು ಮಣ್ಣಾಗಲೇಬೇಕು.

ಕಳೆದ ವಾರ ಮೋಶಾ ಬತ್ತಳಿಕೆಯಿಂದ ಹೊಸ ರಾಜಕೀಯ ಅಸ್ತ್ರವೊಂದು ದೇಶದ ರಾಜಕೀಯ ಚರ್ಚಾವಲಯವನ್ನು ಅಪ್ಪಳಿಸಿತು. ಲೋಕಸಭೆ-ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆಯ ಈ ಒಳ ಉದ್ದೇಶ ಮಹಿಳಾ ಮೀಸಲಾತಿಯ ಹೊರ ರೂಪ ಧರಿಸಿತ್ತು. ಸಂವಿಧಾನ ತಿದ್ದುಪಡಿಯ ಈ ಮಸೂದೆ ಲೋಕಸಭೆಯಲ್ಲಿ ಬಹುಮತವಿಲ್ಲದೆ ಬಿದ್ದು ಹೋಯಿತು. ಮೋದಿ ಸರ್ಕಾರದ ಉದ್ದೇಶ ಈಡೇರಿತು. ಮಸೂದೆಯ ಗೆಲುವು ಮತ್ತು ಸೋಲು ಎರಡರಲ್ಲಿ ಯಾವುದು ಒದಗಿದರೂ ಅದನ್ನು ತನ್ನ ಪರವಾಗಿ ತಿರುಗಿಸಿಕೊಳ್ಳುವ ಮೋದಿ ಸರ್ಕಾರದ ತಂತ್ರ ಫಲಿಸಿದೆ. ಚಿಮ್ಮಿಸಿದ ನಾಣ್ಯ ನೆಲ ಮುಟ್ಟಿದ ನಂತರ ರಾಣಿ ಬಿದ್ದರೇನಂತೆ, ರಾಣಿ ಎದ್ದರೇನಂತೆ ಎರಡೂ ಬದಿಯಲ್ಲಿ ಗೆಲುವು ತನ್ನದೇ ಎಂದು ಮೋಶಾ ಹೆಣೆದಿದ್ದ ಶಕುನಿ ತಂತ್ರವಿದು. ಗೆದ್ದಿದ್ದರೆ ಮಹಿಳಾ ಮೀಸಲಾತಿ ತಂದ ಮಹಾನ್ ಪ್ರತಿಪಾದಕನೆಂದು ಮೋದಿಯವರನ್ನು ದೇಶದ ತುಂಬ ಮೆರೆಸಲಾಗುತ್ತಿತ್ತು.

ಇದೀಗ ಸೋಲಿಸಿದ ಅಪಕೀರ್ತಿಯನ್ನು ಪ್ರತಿಪಕ್ಷಗಳ ಕೊರಳಿಗೆ ಕಟ್ಟುವ ಕುಟಿಲ ಉಪಾಯ ವ್ಯವಸ್ಥಿತವಾಗಿ ಜಾರಿಯಾಗಿದೆ. ಗೆಲ್ಲುವ ಇಲ್ಲವೇ ಸೋಲುವ ಪ್ಲ್ಯಾನ್ ಎ ಮತ್ತು ಪ್ಲ್ಯಾನ್ ಬಿ ಎರಡಕ್ಕೂ ಪೂರ್ವಸಿದ್ಧತೆಗಳು ಬಹು ಮೊದಲೇ ನಡೆದಿದ್ದವು. ಹಠಾತ್ತನೆ ಕರೆದ ಸಂಸತ್ ಅಧಿವೇಶನ, ಅಧಿವೇಶನದ ಹೊಸ್ತಿಲಿನಲ್ಲಿ ನಾರೀಶಕ್ತಿ ವಂದನ ಕುರಿತು ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾದ ಪ್ರಧಾನಿ ಮೋದಿ ಲೇಖನಗಳು, ಮಹಿಳಾ ಮೀಸಲಿನ ಮುಖವಾಡ ಹೊತ್ತು ಮಂಡಿತವಾದ ಮರುವಿಂಗಡಣೆ ಮಸೂದೆ, ಮಸೂದೆಯ ವಿವರಗಳನ್ನು ಕಡೆಯ ಗಳಿಗೆಯ ತನಕ ಗುಟ್ಟಾಗಿ ಇಟ್ಟದ್ದು, ಮರುವಿಂಗಡಣೆಯ ಗುಪ್ತ ಕಾರ್ಯಸೂಚಿಗೆ ಪ್ರತಿಪಕ್ಷಗಳಿಂದ ಸಿಡಿದ ಪ್ರತಿರೋಧ, ಕಡೆಯಲ್ಲಿ ನಡೆದ ಮತದಾನದಲ್ಲಿ ಮಸೂದೆಗೆ ಒದಗಿದ ಸೋಲು, ಸೋತ ತಕ್ಷಣವೇ ಸದನದ ಹೊರಗೆ ಶುರುವಾದ ಪ್ರತಿಭಟನೆಗಳು, ನಿಂದನೆಗಳು ಬಿಜೆಪಿಯಿಂದ ದೇಶಾದ್ಯಂತ ಪ್ರತಿಪಕ್ಷಗಳನ್ನು ನಿಂದಿಸುವ ಸುಸಜ್ಜಿತ ಕಾರ್ಯಕ್ರಮುಗಳೆಲ್ಲ ಈ ಪೂರ್ವನಿಯೋಜಿತ ಶಕುನಿ ತಂತ್ರದತ್ತಲೇ ಬೆರಳು ಮಾಡಿ ತೋರುತ್ತಿವೆ. ಮೋಶಾ ಸರ್ಕಾರ ಮೊದಲೇ ಬರೆಯಲಾಗಿದ್ದ ಚಿತ್ರಕತೆಯಿದು. ದೈತ್ಯ ಚುನಾವಣಾ ಯಂತ್ರದ ರೂಪ ತಳೆದು ನಿಂತಿರುವ ಬಿಜೆಪಿ, ಅದರ ಹಿಂದೆ ಹಬ್ಬಿರುವ ಆರೆಸ್ಸೆಸ್ ಹಾಗೂ ಬಿಜೆಪಿ ಕೇಂದ್ರ-ರಾಜ್ಯ ಸರ್ಕಾರಗಳ ಆಡಳಿತ ಯಂತ್ರಗಳು, ಮೋಶಾ ತಾಳಕ್ಕೆ ಕುಣಿಯುವ ಗೋದಿ ಮೀಡಿಯಾ ನರ್ತಕ ಸಮೂಹ ಎಲ್ಲವೂ ಸೇರಿಕೊಂಡು ಸುಳ್ಳೊಂದನ್ನು ಸತ್ಯವಾಗಿಸಲು ಶ್ರಮಿಸಿವೆ. ಲೋಕಸಭೆಯಲ್ಲಿ ಸೋತಿದ್ದು, ಕ್ಷೇತ್ರ ಮರುವಿಂಗಡಣೆಯ ಹುನ್ನಾರ ಎಂಬುದೂ, ಮಹಿಳಾ ಮೀಸಲು ಮಸೂದೆ ಅಲ್ಲ ಎಂಬುದೂ ಬೆಳಕಿನಷ್ಟೇ ವಾಸ್ತವ. ರಾಜ ಬೆತ್ತಲಾಗಿದ್ದಾನೆ. ಅಂಧಭಕ್ತಿಯಲ್ಲಿ ಕಣ್ಣು ಕಳೆದುಕೊಂಡಿರುವವರ ವಿನಾ ಉಳಿದೆಲ್ಲರಿಗೂ ಈ ಬೆತ್ತಲು ಗೋಚರಿಸಿದೆ.

ಸುಳ್ಳೊಂದನ್ನು ಮತ್ತೆ ಮತ್ತೆ ನೂರು ಬಾರಿ ಹೇಳಿದರೆ ಅದು ಸತ್ಯವಾಗಿಬಿಡುತ್ತದೆ ಎಂಬುದು ಹಿಟ್ಲರ್ ಶಾಹಿಯ ಗೆಬೆಲ್ಸ್ ತಂತ್ರ. ನೂರು ಸಲವೇಕೆ, ಸಾವಿರಾರು ನಾಲಗೆಗಳಲ್ಲಿ ಲಕ್ಷಾಂತರ ಸಲ ಹೇಳಿ ಅದನ್ನೇ ನಿಜ ಮಾಡುತ್ತೇವೆಂದು ಹೊರಟಿದೆ ಮೋಶಾ ಪ್ರಭುತ್ವ. ಕಳೆದ ಹನ್ನೆರಡು ವರ್ಷಗಳಲ್ಲಿ ಈ ತಂತ್ರ ಹತ್ತಾರು ಸಲ ಯಶಸ್ವಿಯಾಗಿದೆ. ಅಬ್ಬುಲ್ಲನನ್ನು ರಿಪೇರಿ ಮಾಡುತ್ತೇವೆಂಬ ದ್ವೇಷದ ಪರದೆಯನ್ನು ಹೆಣೆದು ಜನರ ಕಣ್ಣುಗಳಿಗೆ ಕಟ್ಟಲಾಗಿದೆ. ಜಗತ್ತಿನಲ್ಲಿ ಬದಲಾವಣೆಯೊಂದೇ ಶಾಶ್ವತ ಎಂಬ ಮಾತಿದೆ. ಉಳಿದಂತೆ ಯಾವುದೂ ಶಾಶ್ವತ ಅಲ್ಲ, ಯಾರೂ ಚಿರಂಜೀವಿ ಅಲ್ಲ. ಅಬ್ಬುಲ್ಲನ ರಿಪೇರಿ ಎಂಬ ಈ ಭ್ರಾಂತಿಯ ಪರದೆಯೂ ಒಂದು ದಿನ ಹರಿಯಲೇಬೇಕು. ತಿರುವಿ ಮೆರೆಯುತ್ತಿರುವ ಮೀಸೆಗಳು ಮಣ್ಣಾಗಲೇಬೇಕು. ಆಗಿಯೇ ತೀರುತ್ತದೆ. ಅಲ್ಲಿಯ ತನಕ ಛಿದ್ರವಾಗುತ್ತಲೇ ಇರುವ ಸಾಮಾಜಿಕ ಹಂದರ, ಸೃಷ್ಟಿಯಾಗುತ್ತಲೇ ಇರುವ ಹುಸಿ ಇತಿಹಾಸ, ಬಲಗೊಳ್ಳುತ್ತಲೇ ಸಾಗುವ ಬ್ರಾಹ್ಮಣ್ಯ ಉಂಟು ಮಾಡುವ ಆಳದ ಗಾಯಗಳು ಸುಲಭಕ್ಕೆ ಮಾಯಲಾರವು. ದಶಕಗಳೇ ಬೇಕಿದ್ದೀತು.

ಜನತಂತ್ರಕ್ಕೆ ತೆರಬೇಕಾದೇ ಬೆಲೆ ನಿರಂತರ ಜನಜಾಗೃತಿ ಎಂಬುದು ಹಳೆಯ ಮಾತು ನಿಜ. ಆದರೆ, ಅದು ನಿತ್ಯ ನೂತನವೇ ವಿನಾ ಸವಕಲು ಅಲ್ಲ. ನಮ್ಮದು ಪ್ರಧಾನವಾಗಿ ಚುನಾವಣಾ ಜನತಂತ್ರ. ಐದು ವರ್ಷಗಳಿಗೊಮ್ಮೆ ವೋಟು ಹಾಕುವುದಕ್ಕಷ್ಟೇ ಸೀಮಿತ. ವೋಟು ಹಾಕಿಸಿಕೊಂಡವರು ಐದು ವರ್ಷ ಕಳೆಯುವ ತನಕ ತಿರುಗಿ ನೋಡುವುದಿಲ್ಲ. ಅಂತಹ ನಿರೀಕ್ಷೆಯನ್ನು ಬಹುತೇಕ ಮತದಾರರು ಇಟ್ಟುಕೊಂಡಿಲ್ಲ. ಉತ್ತರದಾಯಿ ಆಗಿರುವ ಜನಪ್ರಾತಿನಿಧ್ಯವನ್ನು ಕಟ್ಟಿ ನಿಲ್ಲಿಸುವ ಸಂಪೂರ್ಣ ಕ್ರಾಂತಿಯೊಂದು ಹುಸಿಯಾಗಿ ಹೋಯಿತು. ಈ ಕ್ರಾಂತಿಯ ಹಿಂದಿದ್ದ ಶಕ್ತಿಗಳು ಈಗ ಅಧಿಕಾರ ಹಿಡಿದಿರುವ ಪ್ರತಿಗಾಮಿ ಶಕ್ತಿಗಳೇ ಆಗಿದ್ದವು ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ.

ಇತ್ತೀಚಿನ ದಿನಗಳಲ್ಲಿ ಪ್ರಧಾನಿಯವರ ಚಾರಿತ್ರ್ಯ ಕುರಿತು ಪುಕಾರುಗಳು ಎದ್ದಿವೆ. ಅವರ ಕಟ್ಟರ್ ಸಮರ್ಥಕಿ ಆಗಿದ್ದ ಮಧು ಪೂರ್ಣಿಮಾ ಕಿಶ್ವರ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ಬಲವಾದ ಬಿರುಗಾಳಿಯನ್ನೇ ಎಬ್ಬಿಸಿದ್ದಾರೆ. ಈ ಪ್ರಯತ್ನದಲ್ಲಿ ಅವರು ಒಂಟಿಯಲ್ಲ ಎಂಬುದು ದಿನದಿಂದ ದಿನಕ್ಕೆ ನಿಚ್ಚಳವಾಗತೊಡಗಿದೆ.


ಮೋದಿಯವರ ಪಕ್ಷ ಪರಿವಾರಗಳಲ್ಲಿರುವ ಕೆಲವು ಅಗೋಚರ ಶಕ್ತಿಗಳು ಕಿಶ್ವರ್ ಬೆನ್ನಿಗೆ ಇದ್ದಂತಿವೆ. ಈವರೆಗೆ ಕಂಡು ಕೇಳಿ ಅರಿಯದ ಆರೋಪಗಳನ್ನು ಕಿಶ್ವರ್ ಮಾಡತೊಡಗಿದ್ದಾರೆ. ದೇಶದ ಪ್ರಧಾನಿಯವರ ಚಾರಿತ್ರ್ಯಹನನ ಹಗುರ ಸಂಗತಿಯಲ್ಲ. ಇದು ಪ್ರಧಾನಿಯವರ ಖಾಸಗಿ ಸಂಗತಿಯಾಗಿ ಉಳಿದಿಲ್ಲ. ಆ ಗಡಿ ರೇಖೆಗಳನ್ನು ಹೊರದಾಟಿ ಬಹಳ ದಿನಗಳೇ ಉರುಳಿವೆ. ಈ ಆಪಾದನೆಗಳು ಸುಳ್ಳೆಂದು ಪ್ರಧಾನಿ ತಾವಾಗಿ ಜನತೆಗೆ ಹೇಳಬೇಕು. ಈ ಆಯ್ದ ಮೌನವು, ಪರಮವಾಚಾಳಿ ಪ್ರಧಾನಿಯವರಿಗೆ ಶೋಭಿಸುವುದಿಲ್ಲ.

ಕಿಶ್ವರ್ ಎಬ್ಬಿಸಿರುವ ಬಿರುಗಾಳಿ ಮಾತ್ರವಲ್ಲ, ಎಪ್ಸ್ಟೀನ್ ಫೈಲ್ ಗಳ ಕುರಿತು ಎದ್ದಿರುವ ಭುಗಿಲು ಕೂಡ ನಿಜವಲ್ಲ ಎಂದು ಪ್ರಧಾನಿ ಬಹಿರಂಗವಾಗಿ ಸಾರಬೇಕಿದೆ.

ಕಿಶ್ವರ್ ಮತ್ತು ಎಪ್ಸ್ಟೀನ್ ನಿಂದ ದೇಶದ ಗಮನವನ್ನು ಬೇರೆಡೆ ತಿರುಗಿಸಲು ಮತ್ತು ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯಲು ಅಲ್ಲಿನ ಮಹಿಳಾ ಮತದಾರರ ಮುಂದೆ ಟಿಎಂಸಿಯನ್ನು ಬೀಳುಗಳೆಯಲು ಸಂಸತ್ ಅಧಿವೇಶನ ಕರೆಯಲಾಯಿತು ಎಂಬ ಕಥಾನಕ ಕೂಡ ಆಧಾರವಿಲ್ಲದ್ದು ಎಂದು ಆಶ್ವಾಸನೆ ನೀಡಬೇಕಿರುವುದು ಪ್ರಧಾನಿಯವರ ಕರ್ತವ್ಯ. ಮಹಿಳೆಯರ ಪರ ಪರಮಸಹಾನುಭೂತಿಯ ಪ್ರದರ್ಶನ ನಡೆಸಿರುವ ಮೋದಿಯವರು ತಮ್ಮ ಪಕ್ಷ ಮತ್ತು ಸರ್ಕಾರದ ಪರಮೋಚ್ಚ ನಾಯಕರು. ಅವರು ಹಾಕಿದ ಗೆರೆಯನ್ನು ದಾಟುವ ಎದೆಗಾರಿಕೆ ಯಾರಿಗೂ ಇಲ್ಲ. ಹೀಗಿದ್ದಾಗ ಚುನಾವಣೆಗಳಲ್ಲಿ ಮೂರನೆಯ ಒಂದರಷ್ಟು ಮಹಿಳಾ ಅಭ್ಯರ್ಥಿಗಳನ್ನು ಹೂಡುವಂತೆ ಅವರು ಆಜ್ಞಾಪಿಸಬೇಕು. ತಮ್ಮ ಪಕ್ಷ ಮತ್ತು ಸರ್ಕಾರದ ಎಲ್ಲ ವಲಯಗಳಲ್ಲಿ ಮೀಸಲು ನೀಡಿ ತಾವೇ ಮೇಲ್ಪಂಕ್ತಿ ಹಾಕಿಕೊಡಬೇಕು.

ಎಲ್ಲಕ್ಕಿಂತ ಹೆಚ್ಚಾಗಿ ತಾವೇ ಮುಂದೆ ನಿಂತು 2023ರಲ್ಲಿ ಲೋಕಸಭಾ ಚುನಾವಣೆಗಳೇ ಹೊಸ್ತಿಲಿನಲ್ಲಿ ಪಾಸು ಮಾಡಿಸಿದ ಮಹಿಳಾ ಮೀಸಲಾತಿಯನ್ನು ಬೇಷರತ್ತಾಗಿ ಜಾರಿಗೆ ಕೊಡಬೇಕು. ಆ ಮೀಸಲಾತಿಯ ಕಾಲಿಗೆ ತೊಡಿಸಿರುವ ಜನಗಣತಿ- ಕ್ಷೇತ್ರ ಮರುವಿಂಗಡಣೆಯ ಸಂಕೋಲೆಗಳನ್ನು ಕೈಯಾರೆ ಕಳಚಬೇಕು.

ಮೋದಿಯವರು ಇದಕ್ಕ್ಯಾಕೆ ಕ್ಷಮೆ ಕೇಳಿಲ್ಲ?



ಪ್ರಧಾನಿ ನರೇಂದ್ರ ಮೋದಿಯವರು ಏಪ್ರಿಲ್ 18ರ ರಾತ್ರಿ 8.30ಕ್ಕೆ ಸರಿಯಾಗಿ ದೇಶವನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಟಿವಿಯಲ್ಲಿ ನೇರ ಪ್ರಸಾರವಾಯಿತು. ಮೊದಲಿಗೆ ಅವರು ಹೇಳಿದ್ದು ಇಷ್ಟೇ: ''ನಾನು ದೇಶದ ತಾಯಂದಿರು ಮತ್ತು ಮಹಿಳೆಯರ ಜೊತೆ ಮಾತನಾಡಲು ಬಂದಿದ್ದೇನೆ'' ಅಂತ ಹೇಳಿ ಆಮೇಲೆ ನೇರವಾಗಿ ಕ್ಷಮೆ ಕೇಳಿದರು, ''ನಾನು ದೇಶದ ತಾಯಂದಿರು ಹಾಗೂ ಮಹಿಳೆಯರ ಕ್ಷಮೆ ಕೇಳುತ್ತೇನೆ'' ಅಂದರು. ಕೊನೆಗೆ ನಾರೀಶಕ್ತಿ ಬಗ್ಗೆ ಮಾತನಾಡುತ್ತಾ, ''ನಿನ್ನೆ ಸಂಸತ್ತಿನ ಮೇಲೆ ದೇಶದ ಚಿತ್ತ ಇತ್ತು. ಆದರೆ ಅಲ್ಲಿ ನಾರೀಶಕ್ತಿ ವಂದನಾ ವಿಫಲವಾಗಿದೆ. ಇದಕ್ಕೆ ವಿಪಕ್ಷಗಳು ಕಾರಣ'' ಎಂದು ಟೀಕಿಸಿದರು. ''ಅವರು ಕೇವಲ ಮತ ಬ್ಯಾಂಕ್ ರಾಜಕೀಯ ಮಾಡುತ್ತಿದ್ದಾರೆ. ಈಗ ದೇಶದ ಜಾಗೃತ ಮಹಿಳೆಯರು ವಿರೋಧ ಪಕ್ಷಗಳಿಗೆ ಸೂಕ್ತ ಉತ್ತರ ನೀಡಲು ಸಿದ್ಧರಾಗಿದ್ದಾರೆ'' ಎಂದು ಎಚ್ಚರಿಸಿದರು.

ಈ ಭಾಷಣ ಕೇಳಿದ ಜನರು ಅದೇ ಕಾಮೆಂಟ್ ಬಾಕ್ಸ್ ನಲ್ಲಿ ನೂರಾರು ಕಾಮೆಂಟ್ ಮಾಡಿದ್ದಾರೆ. ಇದು ನಿಜವಾಗಿ ಕ್ಷಮಾಪಣೆನಾ? ಅಥವಾ ಮತ್ತೊಂದು ರಾಜಕೀಯ ನಾಟಕನಾ? ಅಂತ. ಇದು ರಾಜಕೀಯವಾಗಿ ಆಯ್ಕೆ ಮಾಡಿಕೊಂಡ ಕ್ಷಮಾಪಣೆ ಎನ್ನುವ ಭಾವನೆ ಬಹುತೇಕ ಜನರಲ್ಲಿ ಮೂಡಿದೆ. ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಗೆ ವಿರೋಧ ಪಕ್ಷಗಳು ಸಹಕರಿಸಲಿಲ್ಲ ಎಂದು ಟಿವಿಯಲ್ಲಿ ಮೊಸಳೆ ಕಣ್ಣೀರು ಸುರಿಸುವ ಬದಲು, ಪತ್ರಿಕಾ ಗೋಷ್ಠಿ ನಡೆಸಿ ವಿವರಿಸಲು ಪ್ರಧಾನಿ ಮೋದಿ ಅಥವಾ ಯಾವುದೇ ಕೇಂದ್ರ ಮಂತ್ರಿಗೆ ಧೈರ್ಯವಿಲ್ಲ ಏಕೆ? ನಿಜವಾಗಿ ಮೋದಿ ಅವರು ಕ್ಷಮೆ ಕೇಳಬೇಕಾದ್ದು ಇದೊಂದಕ್ಕೆ ಮಾತ್ರವೇ? ದೇಶದಲ್ಲಿ ಮೋದಿ ಸರ್ಕಾರದಿಂದ ಎಷ್ಟೆಲ್ಲಾ ದೊಡ್ಡ ದೊಡ್ಡ ಅಧ್ವಾನಗಳು ನಡೆದಿವೆ. ಅವುಗಳಿಗೆಲ್ಲಾ ಕ್ಷಮೆ ಕೇಳಿದ್ದಾರಾ? ಇಲ್ಲ ಕೇಳಿಲ್ಲ, ಯಾಕೆ ಕೇಳಿಲ್ಲ?

ಮೋದಿ ಅವರು ನಾರೀಶಕ್ತಿಗೆ ಕ್ಷಮೆ ಕೇಳುತ್ತಿದ್ದಾರೆ. ಆದರೆ ದೇಶದ ಸಾಮಾನ್ಯ ಜನರಿಗೆ ನೀಡಿದ ಭರವಸೆಗಳು ಈಗ ಎಲ್ಲಿವೆ? ಅವುಗಳ ಬಗ್ಗೆ ಒಂದು ಮಾತೂ ಇಲ್ಲ. ಬನ್ನಿ, ಒಂದೊಂದಾಗಿ ನೋಡೋಣ.

ನೋಟು ರದ್ದತಿ : 2016ರಲ್ಲಿ ಮೋದಿ ಅವರು ರಾತ್ರಿ ಒಮ್ಮೆಗೆ 500 ಮತ್ತು 1000 ರೂಪಾಯಿ ನೋಟುಗಳನ್ನು ರದ್ದು ಮಾಡಿದರು. ''ಕಪ್ಪು ಹಣ ಉಳಿಸುವುದಿಲ್ಲ, ಭ್ರಷ್ಟಾಚಾರ ನಿಲ್ಲಿಸುತ್ತೇವೆ, ಉಗ್ರರಿಗೆ ಬಂದೂಕು ತುಂಬುವ ಹಣವನ್ನ ತಡೆಯುತ್ತೇವೆ'' ಎಂದು ಹೇಳಿದರು. ಆದರೆ ಏನಾಯಿತು? ಸಾಮಾನ್ಯ ಜನರು ಬ್ಯಾಂಕ್ ಮುಂದೆ ಕ್ಯೂ ನಿಂತರು. ರೈತರು ಬೆಳೆ ಮಾರಲು ಕಷ್ಟಪಟ್ಟರು. ಸಣ್ಣ ವ್ಯಾಪಾರಿಗಳು ಅಂಗಡಿಗಳನ್ನ ಮುಚ್ಚುವಂತಾಯಿತು. ಲಕ್ಷಾಂತರ ಜನ ತೊಂದರೆ ಅನುಭವಿಸಿದರು. ಉದ್ದೇಶಿತ ಗುರಿ ಏನೂ ಈಡೇರಲಿಲ್ಲ. ಕಪ್ಪು ಹಣ ಅನ್ನೋದು ಹಣದ ರೂಪದಲ್ಲಿ ಇಲ್ಲ ಬದಲಿಗೆ ಅದು ಚಿನ್ನ, ಭೂಮಿಯ ರೂಪದಲ್ಲಿ ಇದೆ ಅಂತ ಆರ್ಥಿಕ ತಜ್ಞರು ಎಚ್ಚರಿಕೆ ಕೊಟ್ಟರೂ ಅದನ್ನ ಕ್ಯಾರೆ ಮಾಡಿಲ್ಲ.

ಇದೇ ನೋಟು ರದ್ದತಿ ಬಗ್ಗೆ ಜಂಭ ಕೊಚ್ಚಿಕೊಂಡಿದ್ದ ಮೋದಿ ಮೋಪಾ ವಿಮಾನ ನಿಲ್ದಾಣದ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿ, ''ನಾನು ಕೇವಲ 50 ದಿನಗಳ ಕಾಲಾವಕಾಶವನ್ನು ಕೇಳಿದ್ದೇನೆ. ಡಿಸೆಂಬರ್ 30 ರವರೆಗೆ ನನಗೆ ಸಮಯ ನೀಡಿ. ಅದರ ನಂತರ, ನನ್ನ ಉದ್ದೇಶ ಅಥವಾ ನನ್ನ ಕಾರ್ಯಗಳಲ್ಲಿ ಯಾವುದೇ ತಪ್ಪು ಕಂಡುಬಂದರೆ, ದೇಶ ನೀಡುವ ಯಾವುದೇ ಶಿಕ್ಷೆಯನ್ನು ಅನುಭವಿಸಲು ನಾನು ಸಿದ್ದನಿದ್ದೇನೆ'' ಅಂತ ಹೇಳಿದ್ದರು. ಇದಕ್ಕೆ ಮೋದಿ ಅಥವಾ ಅವರ ಪಕ್ಷದವರು ಒಂದು ಬಾರಿ ಆದರೂ ಕ್ಷಮೆ ಕೇಳಿದ್ದಾರಾ? ಇಲ್ಲ. ಏಕೆ?

ವಿದೇಶದ ಕಪ್ಪು ಹಣ :- 2014ರ ಚುನಾವಣೆಯಲ್ಲಿ ಮೋದಿ ಅವರು ಗಾಳಿಯಲ್ಲಿ ಗುಂಡನ್ನ ಹೊಡೆದಿದ್ದೋ ಹೊಡೆದಿದ್ದು. ''ವಿದೇಶದಲ್ಲಿ ಇರುವ ಕಪ್ಪು ಹಣ ತಂದು ಪ್ರತಿ ಭಾರತೀಯನ ಅಕೌಂಟ್‌ಗೆ 15 ಲಕ್ಷ ರೂಪಾಯಿ ಹಾಕುತ್ತೇವೆ'' ಅಂತ. ಪಾಪ ನಮ್ಮ ಜನರು ಕಣ್ಣು ಮುಚ್ಚಿ ನಂಬಿದರು. ಆದರೆ ಇಂದು 12 ವರ್ಷಗಳು ಕಳೆದಿವೆ. ಯಾರ ಅಕೌಂಟ್‌ಗೂ ಒಂದು ಪೈಸೆಯೂ ಬಂದಿಲ್ಲ. ಬದಲಿಗೆ ಬಡವರು ಬಡತನದಲ್ಲಿ ಮುಳುಗಿದ್ದಾರೆ. ಶ್ರೀಮಂತರು ಇನ್ನೂ ಶ್ರೀಮಂತರಾಗಿದ್ದಾರೆ. ಈ ಮೋಸಕ್ಕೆ ಕ್ಷಮೆ ಕೇಳಬೇಕಲ್ಲವೇ? ಇಲ್ಲ. ಏಕೆ ಕೇಳಿಲ್ಲ?

ಎರಡು ಕೋಟಿ ಉದ್ಯೋಗ ಸೃಷ್ಟಿ:- ''ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ'' ಎಂದು ಮೋದಿ ಅವರು ಹೇಳಿದ್ದರು. ಯುವಕರು ಸಂತೋಷದಿಂದ ಕೈಚಾಚಿದರು. ಆದರೆ ಇಂದು ಹೇಳಲಾರದಷ್ಟು ಯುವಕರು ನಿರುದ್ಯೋಗದಲ್ಲಿ ಬಳಲುತ್ತಿದ್ದಾರೆ. ಪದವಿ ಪಡೆದವರು ರಸ್ತೆಯಲ್ಲಿ ಟೀ ಮಾರುತ್ತಿದ್ದಾರೆ. ಉದ್ಯೋಗ ಇಲ್ಲದೆ ಮದುವೆಯಾಗಲು ಕಷ್ಟ. ಕುಟುಂಬದ ಹೊರೆ ಹೆಚ್ಚಾಗಿದೆ. ಈ ಭರವಸೆ ಈಡೇರಲಿಲ್ಲ. ಆದರೆ ಕ್ಷಮೆ ಕೇಳಿದ್ದಾರಾ? ಇಲ್ಲ. ಏಕೆ?

ರೂಪಾಯಿ ಮತ್ತು ಡಾಲರ್ :- ''ಡಾಲರ್ ಎದುರು ರೂಪಾಯಿಯನ್ನು 40 ರೂಪಾಯಿಗೆ ನಿಲ್ಲಿಸುತ್ತೇವೆ'' ಎಂದು ಹೇಳಿದ್ದರು. ಆದರೆ ಇಂದು ಒಂದು ಡಾಲರ್‌ಗೆ 100 ರೂಪಾಯಿ ದಾಟಿದೆ. ರೂಪಾಯಿ ಕುಸಿದು ಬಿದ್ದಿದೆ. ಪೆಟ್ರೋಲ್, ಡೀಸೆಲ್, ಆಹಾರ ಪದಾರ್ಥಗಳ ಬೆಲೆ ಆಕಾಶ ಮುಟ್ಟಿದೆ. ಸಾಮಾನ್ಯ ಕುಟುಂಬದ ಕಷ್ಟ ಹೇಳತೀರದಾಗಿದೆ. ಮನೆಗೆ ತರುವ ಒಂದು ಕೆಜಿ ತರಕಾರಿ ಕೂಡ ದುಬಾರಿಯಾಗಿದೆ. ಈ ತಪ್ಪಿಗೆ ಕ್ಷಮೆ ಕೇಳಿದ್ದಾರಾ? ಇಲ್ಲ. ಏಕೆ?

ಗ್ಯಾಸ್ ಸಿಲಿಂಡರ್ :- ''ಗ್ಯಾಸ್ ಸಿಲಿಂಡರ್ ಬೆಲೆಯನ್ನ ಕಡಿಮೆ ಮಡುತ್ತೇವೆ'' ಎಂದು ಹೇಳಿದ್ದರು. ಆದರೆ ಇಂದು ಬೆಲೆ 1200-1300 ರೂಪಾಯಿ ದಾಟಿದೆ. ಆಟೋ ಗ್ಯಾಸ್‌ಗಾಗಿ ಜನರು ರಾತ್ರಿಯೆಲ್ಲಾ ಗ್ಯಾಸ್ ಬಂಕ್ ಮುಂದೆ ಕ್ಯೂ ನಿಲ್ಲುವ ಪರಿಸ್ಥಿತಿ ಎದುರಾಗಿದೆ. ಬಡತನ, ಅಪೌಷ್ಟಿಕತೆ, ಹಸಿವಿನ ರ‍್ಯಾಂಕ್‌ನಲ್ಲಿ ಭಾರತವನ್ನು ಜಗತ್ತಿನಲ್ಲಿ ಕೊನೆಯ ಸ್ಥಾನಕ್ಕೆ ತಂದು ನಿಲ್ಲಿಸಿದ್ದಾರೆ. ಜನರು ರೊಟ್ಟಿ ತಿನ್ನಲು ಕೂಡ ಕಷ್ಟಪಡುತ್ತಿದ್ದಾರೆ. ಇದಕ್ಕೆ ಕ್ಷಮೆ ಕೇಳಿದ್ದಾರಾ? ಇಲ್ಲ.

ಎಲೆಕ್ಟೋರಲ್ ಬಾಂಡ್ :- ಸಾವಿರಾರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿತ್ತು. ಸುಪ್ರೀಂ ಕೋರ್ಟ್ ಛೀಮಾರಿ ಹಾಕಿ ಬಾಂಡ್ ರದ್ದು ಮಾಡಿತು. ಆದರೆ ಮೋದಿ ಅವರು ಕ್ಷಮೆ ಕೇಳಿದ್ದಾರಾ? ಇಲ್ಲ. ಬದಲಿಗೆ ಮತ್ತೆ ಮತ್ತೆ ''ನಾವು ಭ್ರಷ್ಟಾಚಾರ ನಿಲ್ಲಿಸಿದ್ದೇವೆ'' ಎಂದು ಹೇಳುತ್ತಾರೆ.

ಕೋವಿಡ್ ಲಾಕ್‌ಡೌನ್ :- ಕೊವಿಡ್ ಸಮಯದಲ್ಲಿ ನೀವು ತೆಗೆದುಕೊಂಡಿದ್ದ ಏಕಪಕ್ಷೀಯ ನಿರ್ಧಾರಕ್ಕೆ ನೀವು ಕೇವಲ ಕ್ಷಮೆ ಕೇಳುವುದು ಮಾತ್ರವನ್ನ, ನೈತಿಕ ಹೊಣೆಹೊತ್ತು ಪ್ರಧಾನಿ ಸ್ಥಾನದಿಂದ ಕೆಳಗಿಳಿಯಬೇಕಿತ್ತು. ಹಠಾತ್ತನೆ ಲಾಕ್ ಡೌನ್ ಘೋಷಣೆ ಮಾಡಿದಿರಿ. ಕೂಲಿಗೆಂದು ಪಟ್ಟಣಕ್ಕೆ ಬಂದಿದ್ದ ಲಕ್ಷಾಂತರ ಜನರು ಮರಳಿ ತಮ್ಮ ತಮ್ಮ ಊರುಗಳಿಗೆ ವಲಸೆ ಹೊರಟರು. ಲಕ್ಷಾಂತರ ಬಡವರು ನೂರಾರು ಕಿಮೀ ನಡೆದು ತಮ್ಮ ಊರುಗಳ ತಲುಪಿದರು. ಹಲವರು ನಡುರಸ್ತೆಯಲ್ಲೇ ಅನಾಥ ಶವವಾದರು. ಈಗ ನಿಮ್ಮ ಆತ್ಮವನ್ನ ನೀವೇ ಪ್ರಶ್ನಿಸಿಕೊಳ್ಳಿ. ''ಈ ಪ್ರಧಾನಿ ಸ್ಥಾನಕ್ಕೆ ನಾನು ಅರ್ಹನೇ?'' ಎಂದು.

ಹೊತ್ತಿ ಉರಿಯುತ್ತಿರುವ ಮಣಿಪುರ :- ರಷ್ಯಾ-ಉಕ್ರೇನ್ ಯುದ್ಧ ನಿಲ್ಲಿಸಿದ್ದು ಮೋದಿ ಅಂತ ಜಾಹೀರಾತನ್ನ ಸಿದ್ದಪಡಿಸಿ ಅದನ್ನ ಮನೆಮನೆಗೆ ತಲುಪಿಸಿದ್ದರು. ಆದರೆ ತನ್ನ ದೇಶದಲ್ಲೇ ಇರುವ ಮಣಿಪುರ ರಾಜ್ಯ ವರ್ಷಗಳಿಂದ ಉರಿಯುತ್ತಿದೆ. ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿದಾಗಲೂ ಮೋದಿಯವರು ವಹಿಸಿದ ಮೌನವು ಅವರ ''ನಾರೀ ಶಕ್ತಿ''ಯ ಘೋಷಣೆ ಎಷ್ಟು ಪೊಳ್ಳು ಎಂಬುದನ್ನು ಸಾಬೀತುಪಡಿಸಿತು. ಮಹಿಳೆಯರು ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ. ಲಕ್ಷಾಂತರ ಮಂದಿ ಮನೆ ಕಳೆದುಕೊಂಡು ಈಗಲೂ ನಿರಾಶ್ರಿತರ ಶಿಬಿರಗಳಲ್ಲಿ ದಿನಕಳೆಯುತ್ತಿದ್ದಾರೆ. ಮಕ್ಕಳಿಗೆ ಸರಿಯಾದ ಶಿಕ್ಷಣ ಇಲ್ಲ ಅಲ್ಲಿನ ಹಿಂಸೆಯನ್ನ ನಿಲ್ಲಿಸಲು ಮೋದಿ ಸರ್ಕಾರದ ಬಳಿ ಸಾಧ್ಯವಾಗಿಲ್ಲ. ಇದಕ್ಕೆ ಕ್ಷಮೆ ಕೇಳಿದ್ದಾರಾ? ಇಲ್ಲ.

ಇನ್ನು ಗುಜರಾತ್ ದಂಗೆಯ ಸಂತ್ರಸ್ತೆಯ ಅತ್ಯಾಚಾರಿಗಳನ್ನು ಸಂಸ್ಕಾರವಂತರು ಎಂದು ಕರೆದು ಸನ್ಮಾನಿಸಿ ಬಿಡುಗಡೆ ಮಾಡಿದಾಗ ಮೋದಿಯವರ ಮೌನ ಸ್ತ್ರೀ ಕುಲಕ್ಕೆ ಮಾಡಿದ ದ್ರೋಹ. ಹತ್ರಾಸ್ ಮತ್ತು ಉನ್ನಾವೋ ಪ್ರಕರಣಗಳಲ್ಲಿ ಸಂತ್ರಸ್ತೆಯರ ಕುಟುಂಬಕ್ಕೆ ನ್ಯಾಯ ನೀಡುವ ಬದಲು, ವ್ಯವಸ್ಥೆಯು ಅವರನ್ನು ನಡೆಸಿಕೊಂಡ ರೀತಿ ಮತ್ತು ರಾತ್ರೋರಾತ್ರಿ ಶವ ಸಂಸ್ಕಾರ ಮಾಡಿದ ಘಟನೆ ಅಧಿಕಾರ ದುರುಪಯೋಗದ ಪರಮಾವಧಿ. ಅಷ್ಟೇ ಯಾಕೆ ಇತ್ತೀಚಿನ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಸಾವಿರಾರು ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದ್ದರೂ, ಚುನಾವಣಾ ಲಾಭಕ್ಕಾಗಿ ಅವರ ಪರವಾಗೇ ಮತ ಕೇಳಲು ಹೋಗಿದ್ದು ಇದೇ ಪ್ರಧಾನಿ ನರೇಂದ್ರ ಮೋದಿ. ಇದಕ್ಕೆ ಕ್ಷಮೆ ಕೇಳುವ ಧೈರ್ಯವಾದರೂ ನಿಮಗಿದೆಯಾ ಮೋದಿಜಿ?

ಚುನಾವಣಾ ಪ್ರಚಾರಗಳಲ್ಲಿ ''ನಾರೀ ಶಕ್ತಿ''ಯ ಬಗ್ಗೆ ಮಾತನಾಡುವ ಪ್ರಧಾನಿಯವರು, ತಮ್ಮದೇ ಪಕ್ಷದ ಪ್ರಭಾವಿ ನಾಯಕರಿಂದ ಮಹಿಳೆಯರಿಗೆ ದೌರ್ಜನ್ಯವಾದಾಗ ತೋರುವ ಮೌನ ಅತ್ಯಂತ ಭೀಕರವಾದುದು. ಕುಸ್ತಿಪಟುಗಳು ದೆಹಲಿಯ ಬೀದಿಯಲ್ಲಿ ಕಣ್ಣೀರಿಡುತ್ತಾ ಲೈಂಗಿಕ ಕಿರುಕುಳದ ವಿರುದ್ಧ ನ್ಯಾಯ ಕೇಳಿದಾಗ, ಆ ಕಣ್ಣೀರನ್ನು ಒರೆಸದ ಪ್ರಧಾನಿಯವರ ನಿಲುವು ದೊಡ್ಡ ಅಪಮಾನವಾಗಿ ಇತಿಹಾಸದಲ್ಲಿ ದಾಖಲಾಗಿದೆ. ಇಲ್ಲಿ ಸ್ತ್ರೀ ರಕ್ಷಣೆಗಿಂತ ಪಕ್ಷದ ನಾಯಕರ ರಕ್ಷಣೆಯೇ ಮೋದಿಯವರಿಗೆ ಮುಖ್ಯವಾಯಿತೇ ಎಂಬ ಪ್ರಶ್ನೆ ಏಳುತ್ತದೆ. ದೇಶಕ್ಕೆ ಕೀರ್ತಿ ತಂದ ಹೆಣ್ಣುಮಕ್ಕಳು ಲೈಂಗಿಕ ಕಿರುಕುಳದ ವಿರುದ್ಧ ರಸ್ತೆಯಲ್ಲಿ ಕುಳಿತು ನ್ಯಾಯ ಕೇಳಿದಾಗ, ಆರೋಪಿ ಸಂಸದನನ್ನು ರಕ್ಷಿಸಲು ಇಡೀ ಸರ್ಕಾರವೇ ನಿಂತಿದ್ದು ಮಹಿಳೆಯರಿಗೆ ಮಾಡಿದ ಬಹುದೊಡ್ಡ ಅಪಮಾನ. ಇದಕ್ಕಿಂತ ಕ್ರೂರವಾಗಿ ಯಾವ ಪ್ರಧಾನಿಯೂ ನಡೆದುಕೊಳ್ಳಲು ಸಾಧ್ಯವಿಲ್ಲ ಎನ್ನುವಷ್ಟು ಕ್ರೂರವಾಗಿ ನೀವು ದೇಶದ ಮಹಿಳೆಯರ ಜೊತೆ ನಡೆದುಕೊಂಡಿದ್ದೀರಿ.

ಅಂಧಭಕ್ತರು ಇಷ್ಟೇ ಉದಾಹರಣೆಯಾ ಅಂತ ಕೇಳಬಹುದು, ಇನ್ನೂ ಇದೆ. ಸೋನಿಯಾ ಗಾಂಧಿಯವರನ್ನು ''ವಿಧವಾ ಜರ್ಸಿ ಗಾಯ್'' ಎಂದು ಕರೆದದ್ದು ಅಥವಾ ಶಶಿ ತರೂರ್ ಅವರ ಪತ್ನಿಯನ್ನು ''50 ಕೋಟಿ ಗರ್ಲ್‌ಫ್ರೆಂಡ್'' ಎಂದು ಲೇವಡಿ ಮಾಡಿದ್ದು ಒಬ್ಬ ದೇಶದ ಪ್ರಧಾನಿಗೆ ಶೋಭೆ ತರುವಂತಹದ್ದಲ್ಲ. ಅಧಿಕಾರಕ್ಕಾಗಿ ಮಹಿಳೆಯರ ವೈಯಕ್ತಿಕ ಜೀವನವನ್ನೂ ಅಪಹಾಸ್ಯ ಮಾಡುವ ಇಂತಹ ಕೀಳುಮಟ್ಟದ ಮಾತುಗಳನ್ನು ಭಾರತದ ಸ್ತ್ರೀಕುಲ ಎಂದಿಗೂ ಮರೆಯಲು ಸಾಧ್ಯವಿಲ್ಲ. ಇನ್ನೂ ಹಲವು ಉದಾಹರಣೆಗಳಿವೆ. ಆದರೆ ಇಲ್ಲಿ ಹೆಸರಿಸಿದ್ದು ಬೆರಳಣಿಕೆಯಷ್ಟು ಮಾತ್ರ.

ಮಹಿಳಾ ಮೀಸಲಾತಿ : ಬಿಜೆಪಿಯ ಪಾಲಿಟಿಕಲ್ ಮಾರ್ಕೆಟಿಂಗ್ ತಂತ್ರ

ಭಾರತೀಯ ರಾಜಕೀಯ ಇತಿಹಾಸದಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮ ಅಥವಾ ಮಹಿಳಾ ಮೀಸಲಾತಿ ಮಸೂದೆ ಒಂದು ಮಹತ್ವದ ಮೈಲಿಗಲ್ಲು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಇದನ್ನು ಕೇವಲ ಸಾಮಾಜಿಕ ಸುಧಾರಣೆಯಾಗಿ ಮಾತ್ರವಲ್ಲದೆ, ಬಿಜೆಪಿ ಒಂದು ಅತ್ಯಂತ ವ್ಯವಸ್ಥಿತ ಮತ್ತು ಚಾಣಾಕ್ಷ ಪಾಲಿಟಿಕಲ್ ಮಾರ್ಕೆಟಿಂಗ್ ತಂತ್ರವಾಗಿ ಬಳಸಿಕೊಳ್ಳುವುದಕ್ಕೆ ಯತ್ನಿಸಿ ವಿಫಲವಾಗಿದೆ.

ಬಿಜೆಪಿ ಮಹಿಳಾ ಮತದಾರರನ್ನು ಒಂದು ಪ್ರಬಲ ವೋಟ್ ಬ್ಯಾಂಕ್ ಆಗಿ ಪರಿವರ್ತಿಸುವಲ್ಲಿ ಪ್ರಯತ್ನಿಸಿತ್ತು. ನಾರಿ ಶಕ್ತಿ ಎಂಬ ಬ್ರಾಂಡ್ ಅಡಿಯಲ್ಲಿ ಮಹಿಳೆಯರನ್ನು ನೇರವಾಗಿ ತಲುಪುವ ತಂತ್ರವನ್ನು ಬಿಜೆಪಿ ರೂಪಿಸಿತ್ತು. ಮಹಿಳಾ ಮೀಸಲಾತಿ ಮಸೂದೆಯನ್ನು ಈ ಬ್ರಾಂಡ್‌ನ ಸರ್ವೋಚ್ಚ ಸಾಧನೆಯಾಗಿ ಪ್ರಸ್ತುತಪಡಿಸಲಾಯಿತು. ಮಹಿಳಾ ಮೀಸಲಾತಿ ಮಸೂದೆ ಕಳೆದ ಮೂರು ದಶಕಗಳಿಂದ ಸಂಸತ್ತಿನಲ್ಲಿ ನೆನೆಗುದಿಗೆ ಬಿದ್ದಿತ್ತು. 2023ರಲ್ಲೇ ಸರ್ವ ಪಕ್ಷಗಳ ಸರ್ವಾನುಮೋದನೆಯೊಂದಿಗೆ ಸಂವಿಧಾನದ ಆರ್ಟಿಕಲ್ 334 ತಿದ್ದುಪಡಿ ತಂದು ಮಹಿಳಾ ಮೀಸಲಾತಿಯನ್ನು ಕಾನೂನು ಮಾಡಿಲಾಗಿತ್ತು. ಆದಾಗ್ಯೂ, ಈಗ ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವ ಮೂಲಕ ಬಿಜೆಪಿ ತನ್ನನ್ನು ''ನಿರ್ಣಾಯಕ ಮತ್ತು ಇಚ್ಛಾಶಕ್ತಿಯುಳ್ಳ ಪಕ್ಷ'' ಎಂದು ಬಿಂಬಿಸಿಕೊಳ್ಳಲು ಯತ್ನಿಸಿತ್ತು. ಇವೆಲ್ಲಾ ಚುನಾವಣಾ ಗಿಮಿಕ್ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಈ ಬಾರಿ ವಿಶೇಷ ಅಧಿವೇಶನ ಕರೆದಿದ್ದಂತೂ ಚುನಾವಣಾ ಕಾರ್ಯತಂತ್ರದ ಭಾಗವಾಗಿತ್ತು ಎನ್ನುವುದನ್ನು ಪ್ರತ್ಯೇಕಿಸಿ ಹೇಳಬೇಕೆಂದಿಲ್ಲ.

''ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಕೇವಲ ಭರವಸೆ ನೀಡಿದ್ದವು, ಆದರೆ ನಾವು ಮಾಡಿ ತೋರಿಸಿದೆವು'' ಎಂಬ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಹುನ್ನಾರವನ್ನು ಬಿಜೆಪಿ ಮಾಡಿತ್ತು. ಲೋಕಸಭೆಯಲ್ಲಿ ಮಂಡಿಸಲಾದ ಮಹಿಳಾ ಮೀಸಲಾತಿ ಮಸೂದೆಗೆ (ಸಂವಿಧಾನದ 131ನೇ ತಿದ್ದುಪಡಿ ಮಸೂದೆ) ಅಗತ್ಯವಾದ ಮೂರನೇ ಎರಡರಷ್ಟು (2/3) ಬಹುಮತ ಸಿಗದೆ ಸೋಲನುಭವಿಸಿದೆ. ಅದಾದ ಬಳಿಕ ಮಸೂದೆ ಜಾರಿಯಾಗದಂತೆ ಅಡ್ಡಗಾಲು ಹಾಕಿದ್ದೇ ಕಾಂಗ್ರೆಸ್ ಎಂದು ಬಿಜೆಪಿ ಟೀಕಿಸಿತ್ತು. ಇವೆಲ್ಲಾ ಪೂರ್ವಯೋಜಿತ ಚುನಾವಣಾ ಕಾರ್ಯತಂತ್ರದ ಭಾಗವಾಗಿಯೇ ಇತ್ತು. ಮಹಿಳೆಯರಿಗೆ ಕಾಂಗ್ರೆಸ್ ದ್ರೋಹ ಬಗೆದಿದೆ ಎಂಬ ರಾಜಕೀಯ ನಿರೂಪಣೆಯನ್ನು ಯಶಸ್ವಿಯಾಗಿ ಜನರ ತಲೆಯೊಳಗೆ ತುಂಬುವುದಕ್ಕೆ ಬಿಜೆಪಿ ಯತ್ನಿಸುತ್ತಿದೆ. ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳನ್ನು ಮಹಿಳಾ ವಿರೋಧಿ ಎಂಬಂತೆ ಚಿತ್ರಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಆದರೇ, ವಾಸ್ತವಾಂಶ ಬೇರೆಯದ್ದೇ ಇದೆ.

ಇನ್ನು, ರಾಜಕೀಯದಲ್ಲಿ ಭಾವನೆಗಳಿಗೆ ಹೆಚ್ಚಿನ ಬೆಲೆ ಇದೆ. ಪ್ರಧಾನಿ ಮೋದಿ ರಕ್ಷಾಬಂಧನ, ಉಜ್ವಲ ಯೋಜನೆ (ಅಡುಗೆ ಅನಿಲ), ಮತ್ತು ಸ್ವಚ್ಛ ಭಾರತ್ ಯೋಜನೆಯ ಅಡಿಯಲ್ಲಿ ಮಹಿಳೆಯರ ಗೌರವ ಮತ್ತು ಸುರಕ್ಷತೆಯ ಬಗ್ಗೆ ಮಾತನಾಡುವ ಮೂಲಕ ಅವರೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾರೆ. ಮಹಿಳಾ ಮೀಸಲಾತಿಯನ್ನು ಆ ಭಾವನಾತ್ಮಕ ಸರಣಿಯ ಮುಂದುವರಿದ ಭಾಗವಾಗಿ ''ಸೋದರಿಯರಿಗೆ ನೀಡುವ ಉಡುಗೊರೆ'' ಎಂಬ ರೀತಿಯಲ್ಲಿ ಮಾರ್ಕೆಟಿಂಗ್ ಮಾಡಲಾಯಿತು. ಮೂರನೇ ಎರಡರಷ್ಟು ಬಹುಮತ ಸಿಗದೇ ಹೋದ ಮರುಕ್ಷಣದಿಂದಲೇ ಬಿಜೆಪಿ ಮಹಿಳಾ ಮೋರ್ಚಾದ ಮೂಲಕ ತಳಮಟ್ಟದವರೆಗೂ ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟುತ್ತಿದೆ. ಮಸೂದೆ ಮಂಡನೆ, ಜಾರಿಯಾಗುವವರೆಗೆ ಈ ವಿಷಯವನ್ನು ಜೀವಂತವಿಟ್ಟುಕೊಂಡೇ ಪ್ರತಿ ಚುನಾವಣೆಯಲ್ಲಿ ಮಹಿಳೆಯರನ್ನು ಭಾವನಾತ್ಮಕವಾಗಿ ಸೆಳೆಯಲು ಅಕ್ಷರಶಃ ಮುಂದಾಗಿದೆ.

ಮಹಿಳಾ ಮೀಸಲಾತಿಯನ್ನು ವಿರೋಧಿಸುವುದು ಯಾವುದೇ ಪಕ್ಷಕ್ಕೆ ಸಾಧ್ಯವಿಲ್ಲ. ಹೀಗಾಗಿ, ವಿರೋಧ ಪಕ್ಷಗಳು ಒಬಿಸಿ () ಕೋಟಾದ ಬಗ್ಗೆ ಪ್ರಶ್ನೆ ಎತ್ತಿದ್ದವು. 2023ರ ಕಾಯಿದೆಯಲ್ಲಿ ವಿರೋಧ ಪಕ್ಷಗಳೆಲ್ಲ ಒಕ್ಕೊರಲಿನಿಂದ ಆಗ್ರಹಿಸಿದಂತೆ ಹಾಲಿ 543 ಸ್ಥಾನಗಳಲ್ಲೇ ಶೇ. 33ರ ಮೀಸಲಾತಿಯನ್ನು ಕಲ್ಪಿಸದೆ 2026/2027ರ ಜನಗಣತಿ ಆಧರಿಸಿದ ಕ್ಷೇತ್ರ ಮರುವಿಂಗಡಣೆಯಾದ ನಂತರ ಮೀಸಲಾತಿಯನ್ನು ಜಾರಿ ಮಾಡಲಾಗುವುದು ಎಂಬ ಅನಗತ್ಯವಾಗಿತ್ತು. ಮಹಿಳಾ ಮೀಸಲಾತಿಯನ್ನು 2034ರ ತನಕ ಜಾರಿ ಮಾಡಲು ಸಾಧ್ಯವಾಗದಂತೆ ಷರತ್ತುಗಳನ್ನು ಸೇರಿಸಿರುವ ಕಾರಣಕ್ಕೆ ವಿರೋಧಿಸಿದ್ದನ್ನು ಮಹಿಳಾ ವಿರೋಧಿ ಕಾಂಗ್ರೆಸ್ ಎಂಬಂತೆ ಬಿಜೆಪಿ ತನ್ನ ರಾಜಕೀಯ ನಿರೂಪಣೆಯನ್ನೇ ಬದಲಾಯಿಸಿದೆ. ಅಂದರೇ, ಈ ಮಟ್ಟಿಗಿನ ಕೀಳು ರಾಜಕೀಯವನ್ನು ಮಾಡಿ ಜನರನ್ನು ಮತ್ತೆ ಮತ್ತೆ ಮೂರ್ಖರನ್ನಾಗಿ ಮಾಡುವುದಕ್ಕೆ ಬಿಜೆಪಿ ಯತ್ನಿಸಿದೆ.

ಕ್ರೆಡಿಟ್ ಪಾಲಿಟಿಕ್ಸ್

ಬಿಜೆಪಿ ಮಹಿಳಾ ಮೋರ್ಚಾ ಮಹಿಳಾ ಮೀಸಲಾತಿ (ನಾರಿ ಶಕ್ತಿ ವಂದನ್ ಅಧಿನಿಯಮ) ವಿಚಾರದಲ್ಲಿ ಕಾಂಗ್ರೆಸ್ ಅನ್ನು ಟೀಕಿಸಲು ಮುಖ್ಯ ಕಾರಣ ಕ್ರೆಡಿಟ್ ಪಾಲಿಟಿಕ್ಸ್.

ಬಿಜೆಪಿ, ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತಂದಿದ್ದು ಮೋದಿ ಸರ್ಕಾರ ಎಂದು ಹೇಳುತ್ತಿದೆ. ಆದರೆ ಕಾಂಗ್ರೆಸ್ ಈಗ ಅದರಲ್ಲಿ ಒಳ ಮೀಸಲಾತಿ (ಕೋಟಾ) ನೆಪವೊಡ್ಡಿ ಜಾರಿಯನ್ನು ವಿಳಂಬಗೊಳಿಸಲು ನೋಡುತ್ತಿದೆ ಎಂದು ಬಿಜೆಪಿಯ ಆರೋಪ ಮಾಡುತ್ತಿದೆ. ಕಾಂಗ್ರೆಸ್ ಈ ಹಿಂದೆ ಜಾರಿಗೆ ತರಲು ಪ್ರಯತ್ನಿಸಿದ್ದ ಮಸೂದೆಯನ್ನು ಬಿಜೆಪಿ ಬೆಂಬಲಿಸಿರಲಿಲ್ಲ ಎಂದು ನೆನಪಿಸುತ್ತದೆ. ಈ ''ಯಾರು ಮೊದಲು?'' ಎಂಬ ಪೈಪೋಟಿಯಲ್ಲಿ ಮಹಿಳೆಯರ ನೈಜ ಸಬಲೀಕರಣಕ್ಕಿಂತ ಮತಬ್ಯಾಂಕ್ ಮುಖ್ಯವಾಗಿ ಕಾಣುತ್ತಿದೆ ಎನ್ನುವುದರಲ್ಲಿ ಅನುಮಾನವಿಲ್ಲ.



ಇನ್ನು, ನರೇಂದ್ರ ಮೋದಿ ಅವರನ್ನು ಮಹಾನ್ ಸ್ತ್ರೀವಾದಿ ಎಂದು ಬಿಂಬಿಸಿ, ಕಾಂಗ್ರೆಸ್ ಮತ್ತು ಇತರೆ ವಿರೋಧಿ ಪಕ್ಷಗಳನ್ನು ಸ್ತ್ರೀ ವಿರೋಧಿ ಎಂದು ಈಗ ಬಿಂಬಿಸುತ್ತಿರುವ ಬಿಜೆಪಿ, ಬ್ರಿಜ್ ಭೂಷಣ್ ಸಿಂಗ್ ಪ್ರಕರಣದ ಬಗ್ಗೆ ಧ್ವನಿ ಎತ್ತಿಲ್ಲ ಯಾಕೆ ? ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯದ ವಿರುದ್ಧ ಬೀದಿಗಿಳಿದಾಗ ಬಿಜೆಪಿ ಮಹಿಳಾ ನಾಯಕಿಯರು ತೋರಿದ ಮೌನವನ್ನು ಸ್ತ್ರೀವಿರೋಧಿ ಎನ್ನಬೇಕೆ ಅಥವಾ ಸ್ತ್ರೀವಾದಿ ಎಂದು ಹಾಡಿಹೊಗಳಬೇಕೆ? ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆದ ಅಮಾನವೀಯ ಕೃತ್ಯಗಳ ಬಗ್ಗೆ ತುಟಿ ಬಿಚ್ಚದ ಮೋದಿಯನ್ನು ಯಾವ ಮುಖ ಇಟ್ಟುಕೊಂಡು ಸ್ತ್ರೀವಾದಿ ಎಂದು ಬಿಂಬಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ? ಉನ್ನಾವೋ ಪ್ರಕರಣ, ಹತ್ರಾಸ್ ಪ್ರಕರಣ, ಸೌಜನ್ಯ ಪ್ರಕರಣ ಸೇರಿ ಇನ್ನೂ ಅನೇಕ ಮಹಿಳಾ ದೌರ್ಜನ್ಯದ ಪ್ರಕರಣಗಳ ಬಗ್ಗೆ ಸ್ತ್ರೀವಾದಿ ಚಿಂತನೆಯನ್ನು ಮರೆತಿತ್ತೇ ಬಿಜೆಪಿ? ಪ್ರಧಾನಿ ನರೇಂದ್ರ ಮೋದಿಗೆ ಇವೆಲ್ಲಾ ಯಾವುವು ಕಾಣಿಸಿಲ್ಲವೇ ? ಈಗ ರಾಜಕೀಯ ಕುತಂತ್ರದಿಂದ ಜಾರಿಗೆ ತರಲು ಯತ್ನಿಸಿದ್ದ ಮಸೂದೆಗೆ ಬಹುಮತ ಸಿಕ್ಕಿಲ್ಲ ಎನ್ನುವ ಕಾರಣಕ್ಕೆ ಕಾಂಗ್ರೆಸ್ ಮತ್ತು ಇತರೆ ವಿರೋಧಿ ಪಕ್ಷಗಳ ವಿರುದ್ಧ ನಾಲಿಗೆ ಹರಿಬಿಡುತ್ತಿರುವ ಬಿಜೆಪಿಗೆ ನಾಚಿಕೆ ಮಾನ ಮರ್ಯಾದೆ ಎಳ್ಳಷ್ಟಾದರೂ ಇದೆಯೇ ಎನ್ನುವ ಪ್ರಶ್ನೆಯನ್ನು ಕೇಳದೆ ಸುಮ್ಮನಿರುವುದಕ್ಕೆ ಸಾಧ್ಯವಿದೆಯೆ? ಕಾಂಗ್ರೆಸ್ ಮತ್ತು ಇತರೆ ವಿರೋಧಿ ಪಕ್ಷಗಳನ್ನು ಈಗ ಮಹಿಳಾ ವಿರೋಧಿ ಎಂಬ ಕಥನ ಕಟ್ಟುತ್ತಿರುವ ಬಿಜೆಪಿಗೆ ಇಡೀ ದೇಶದಾದ್ಯಂತ ನಡೆದ ಮಹಿಳಾ ದೌರ್ಜನ್ಯ ಪ್ರಕರಣಗಳ ಬಗ್ಗೆ ಧ್ವನಿ ಎತ್ತುವುದಕ್ಕೆ ಬಾಯಿಗೆ ಕೋಲು ತುರುಕಿಸಿದವರು ಯಾರು? ಈಗ ಪ್ರಗತಿಪರ ವಿಚಾರಗಳ ಬಗ್ಗೆ ಮಾತನಾಡುವ ಕಾಂಗ್ರೆಸ್ ಮತ್ತು ಇತರೆ ವಿರೋಧ ಪಕ್ಷಗಳು ಪ್ರಾಯೋಗಿಕವಾಗಿ ಮೀಸಲಾತಿಗೆ ಅಡ್ಡಿಪಡಿಸಿದೆ ಎಂದು ಬಿಂಬಿಸುವ ಮೂಲಕ ಮಹಿಳಾ ಮತದಾರರಲ್ಲಿ ಗೊಂದಲ ಮೂಡಿಸುವ ಕೀಳು ತಂತ್ರವನ್ನು ಬಿಜೆಪಿ ಹೆಣೆಯುತ್ತಿದೆ.

ಬಿಜೆಪಿಗೆ ಮಹಿಳೆಯರ ಮೇಲಿನ ದೌರ್ಜನ್ಯಕ್ಕಿಂತ ''ಮೀಸಲಾತಿ'' ಎನ್ನುವುದೇ ದೊಡ್ಡ ಚುನಾವಣಾ ಅಸ್ತ್ರವಾಗಿದೆ. ದೌರ್ಜನ್ಯದ ಬಗ್ಗೆ ಮಾತನಾಡಿದರೆ ಅದು ಆಡಳಿತದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಮೀಸಲಾತಿಯ ಬಗ್ಗೆ ಮಾತನಾಡಿದರೆ ಅದು ಭವಿಷ್ಯದ ಭರವಸೆಯಾಗಿ ಮತ್ತು ಪ್ರಬಲ ಶಾಸನಾತ್ಮಕ ಸಾಧನೆಯಾಗಿ ಕಾಣುತ್ತದೆ. ಇದೊಂದು ಅಪ್ಪಟ ಬಿಜೆಪಿಯ ಪಾಲಿಟಿಕಲ್ ಮಾರ್ಕೆಟಿಂಗ್ ತಂತ್ರವಲ್ಲದೇ ಮತ್ತೇನು?

ಯಾವುದೇ ಪಕ್ಷದ ಮಹಿಳಾ ಘಟಕಗಳು ಕೇವಲ ಪಕ್ಷದ ಹಿತಾಸಕ್ತಿ ಕಾಯುವ ರಕ್ಷಣಾ ಕವಚಗಳಾಗುವ ಬದಲು, ದೌರ್ಜನ್ಯಕ್ಕೊಳಗಾದ ಮಹಿಳೆಯರ ಪರವಾಗಿ ಪಕ್ಷಾತೀತವಾಗಿ ಧ್ವನಿ ಎತ್ತಿದಾಗ ಮಾತ್ರ ನೈತಿಕ ಬಲ ಸಿಗುತ್ತದೆ. ಪ್ರಸ್ತುತ, ಬಿಜೆಪಿ ಮಹಿಳಾ ಮೋರ್ಚಾದ ನಿಲುವು ಕಾಂಗ್ರೆಸ್‌ನ ಮಹಿಳಾ ಮತಬ್ಯಾಂಕ್ ಅನ್ನು ತನ್ನ ಸೈದ್ಧಾಂತಿಕ ಚೌಕಟ್ಟಿನೊಳಗೆ ಸೆಳೆಯುವ ಪ್ರಯತ್ನವಲ್ಲದೇ ಮತ್ತೇನಲ್ಲ.

ಅತ್ಯಂತ ವಿವಾದಾಸ್ಪದವಾಗಿರುವ ಕ್ಷೇತ್ರ ಮರುವಿಂಗಡಣೆಯ ಷರತ್ತುಗಳನ್ನು ಮಹಿಳಾ ಮೀಸಲಾತಿಯೊಂದಿಗೆ ಸೇರಿಸಿದಲ್ಲಿ ಸಂಸತ್ತಿನಲ್ಲಿ 2/3 ಬಹುಮತ ಸಿಗುವುದಿಲ್ಲ ಎಂದು ಗೊತ್ತಿದ್ದರೂ ಈ ಪ್ರಕ್ರಿಯೆಗಳನ್ನು ಶುರು ಮಾಡಿದ್ದರ ಹಿಂದೆ ಬಿಜೆಪಿಯ ರಾಜಕೀಯ ಕುತಂತ್ರ ಎದ್ದು ಕಾಣಿಸುತ್ತಿದೆ. ಮಹಿಳಾ ಮೀಸಲಾತಿ ತರುವುದೇ ಬಿಜೆಪಿಯ ಮುಖ್ಯ ಉದ್ದೇಶವಾಗಿದ್ದಲ್ಲಿ ಹಾಲಿ 543 ಸಂಸದೀಯ ಕ್ಷೇತ್ರಗಳಲ್ಲೇ ಶೇ.33ರಷ್ಟು ಮೀಸಲಾತಿ ಕೊಡುವ ಸರಳ ತಿದ್ದುಪಡಿ ತರಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮುಂದಾಗಿಲ್ಲ ಯಾಕೆ ಎನ್ನುವ ಪ್ರಶ್ನೆಗೆ ತನ್ನ ಬೌದ್ಧಿಕ ಬಡತನದಿಂದ ಮತ್ತೆ ಕಾಂಗ್ರೆಸ್ ಮತ್ತು ಇತರೆ ವಿರೋಧ ಪಕ್ಷಗಳು ಮಹಿಳಾ ವಿರೋಧಿ ಎಂದೇ ಹೇಳುತ್ತದೆ. ಮಹಿಳಾ ಮೀಸಲಾತಿ ಮಸೂದೆಗೆ ವಿವಾದಿತ ಕ್ಷೇತ್ರ ಮರುವಿಂಗಡಣೆಯ ಮಸೂದೆಯನ್ನು ತಳುಕು ಹಾಕಿ 2034ರವರೆಗೂ ಜಾರಿಯಾಗದಂತೆ ನೋಡಿಕೊಂಡು ಈಗ ಕಾಂಗ್ರೆಸ್ ಮತ್ತು ಇತರೆ ವಿರೋಧ ಪಕ್ಷಗಳ ಕಡೆಗೆ ಬೊಟ್ಟು ಮಾಡುವ ಬಿಜೆಪಿಯನ್ನು ಮಹಿಳೆಯರೇ ಯಾರು ಮಹಿಳಾ ವಿರೋಧಿ ? ಎಂದು ಪ್ರಶ್ನಿಸಬೇಕಿದೆ.

ಒಟ್ಟಿನಲ್ಲಿ, ಮಹಿಳಾ ಮೀಸಲಾತಿ ಕೇವಲ ಒಂದು ಪಕ್ಷದ ಸಾಧನೆಯಾಗಬಾರದು ಅಥವಾ ಮತ್ತೊಂದು ಪಕ್ಷದ ವಿರೋಧಕ್ಕೆ ಬಲಿಯಾಗಬಾರದು. ಇದು ''ಮಹಿಳೆಯರ ಹಕ್ಕು''. ಈ ವಿಧೇಯಕವು ಕಾಗದದ ಮೇಲಿನ ಅಕ್ಷರವಾಗಿ ಉಳಿಯದೆ, ಶೀಘ್ರವಾಗಿ ಜಾರಿಯಾದಾಗ ಮಾತ್ರ ಮಹಿಳೆಯರಿಗೆ ನಿಜವಾದ ಗೆಲುವು ಸಿಕ್ಕಂತಾಗುತ್ತದೆ. ರಾಜಕೀಯ ಕುತಂತ್ರಗಳ ನಡುವೆ ಮಹಿಳೆಯರ ಹಿತಾಸಕ್ತಿ ಬಲಿಯಾಗಬಾರದು ಎನ್ನುವುದೇ ಮುಖ್ಯ ಉದ್ದೇಶ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR